# ಕೊಳಲು

## ಮುನ್ನುಡಿ

ಶ್ರೀಮಾನ್ ಪುಟ್ಟಪ್ಪನವರ ‘ಕೊಳಲಿ’ಗೆ ಮುನ್ನುಡಿ ನುಡಿಯುವುದು ನನಗೊಂದು ಹೆಮ್ಮೆಯ ವಿಷಯ.

ಕನ್ನಡ ಕಾವ್ಯದ ಹೊಲವನ್ನು ಹೊಸ ರೀತಿಯಲ್ಲಿ ಉತ್ತು ಬೆಳೆ ಮಾಡಬೇಕೆಂದು ಪ್ರಯತ್ನಪಡುತ್ತಿರುವವರಲ್ಲಿ ಶ್ರೀ ಪುಟ್ಟಪ್ಪನವರ ಸಾಧನೆ ಸ್ತೋತ್ರಾರ್ಹವಾದದು. ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಇವರು ವಿದ್ಯಾರ್ಥಿ ಕವಿ ಸಮ್ಮೇಳನಕ್ಕೆ ಅಧ್ಯಕ್ಷರಾದರು. ಈಗ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಬೋಧಕರಾಗಿ ತಮ್ಮ ಉತ್ಸಾಹವನ್ನು ಕಿರಿಯರಲ್ಲಿ ತುಂಬುತ್ತಿರುವರು. ಶ್ರೀಮನ್ ಮಹಾರಾಜರವರ ಜೂಬಿಲಿ ಮಹೋತ್ಸವದಲ್ಲಿ ತಮ್ಮ ರಾಜಭಕ್ತಿಯನ್ನೂ, ದೇಶಭಕ್ತಿಯನ್ನೂ ‘ಬೆಳ್ಳಿಯಹಬ್ಬದ ಕಬ್ಬದ ಬಳ್ಳಿ’ ಎಂಬ ಗೀತದಲ್ಲಿ ಪ್ರಕಟಿಸಿರುತ್ತಾರೆ. ಇವರ ‘ಬೊಮ್ಮನಹಳ್ಳಿ ಕಿಂದರಿ ಜೋಗಿ’ಗೆ ಮರುಳಾಗದ ಮಕ್ಕಳೇ ಇಲ್ಲ. ‘ಯಮನ ಸೋಲು,’ ‘ಜಲಗಾರ,’ ‘ಚಂದ್ರಹಾಸ,’ ‘ಬಿರುಗಾಳಿ’ ಮುಂತಾದ ನಾಟಕಗಳು ವಿಧ ವಿಧ ಪ್ರಯತ್ನ ಪರೀಕ್ಷೆಗಳಿಗೆ ಸಾಕ್ಷಿಯಾಗಿವೆ. ಇವರ ಕವನಗಳನ್ನು ಸರಸ್ವತೀ ದೇವಿಯೇ ನುಡಿಸುತ್ತಿರುವಳೆಂಬುದರಲ್ಲಿ ಸಂದೇಹವಿಲ್ಲ.

ಕವಿತ್ವ ಮಾಡುವ ಕುತೂಹಲದಿಂದ ಗ್ರಂಥಗಳನ್ನು ತಡಕಿ, ಲಕ್ಷಣಗಳನ್ನು ಕತ್ತು ಹಿಸುಕಿ, ಹತ್ತು ದಿಕ್ಕುಗಳನ್ನೂ ನೋಡುತ್ತ ಕ್ಲೇಶಪಡುತ್ತಿದ್ದ ತನಗೆ ವಾಗ್ದೇವಿ ಬಂದು ‘ಹುಚ್ಚ ನಿನ್ನ ಹೃದಯದಲ್ಲಿ ನೋಡಿ ಬರೆ’ ಎಂಬುದಾಗಿ ಉಪದೇಶಿಸಿದಳೆಂದು ಒಬ್ಬ ಇಂಗ್ಲಿಷ್ ಕವಿ ಹೇಳಿರುತ್ತಾನೆ. ಅದೇ ರಹಸ್ಯವನ್ನು ಮತ್ತೊಬ್ಬ ಇಂಗ್ಲಿಷ್ ಕವಿ ‘ಹೃದಯದಿಂದ ಬರುವುದು ಯಾವುದೋ, ಅದೇ ಹೃದಯಕ್ಕೆ ಹೋಗುವುದು’ ಎಂಬುದಾಗಿ ಸಾರಿದ್ದಾನೆ. ಇವರು ಹುಟ್ಟಿ ಬೆಳೆದಿದ್ದು ಶಿವಮೊಗ್ಗೆಯ ಮಲೆನಾಡಿನ ಒಕ್ಕಲು ಮಕ್ಕಳ ಕುಲದಲ್ಲಿ; ಇವರ ವಾಸ, ಮೈಸೂರಿನ ರಾಮಕೃಷ್ಣಾಶ್ರಮದಲ್ಲಿ; ಉದ್ಯೋಗ, ಕಾವ್ಯಪ್ರಿಯರೊಡನೆ ಕವಿತಾಪ್ರಸಾದವನ್ನು ಸವಿಯುವುದರಲ್ಲಿ. ಜೀವಾನಂದ, ಕಾವ್ಯಾನಂದ, ಬ್ರಹ್ಮಾನಂದಗಳನ್ನು ತಮ್ಮ ಶಕ್ತಿಗನುಗುಣವಾಗಿ ಅಂತಃಕರಣದಲ್ಲಿ ತುಂಬಿಕೊಳ್ಳುತ್ತಾ ಹಕ್ಕಿ ಹಾಡಿದಂತೆ ಸುಖವಾಗಿ ಹಾಡುವರು ಪುಟ್ಟಪ್ಪನವರು. ಇವರ ತಿರುಳುಗನ್ನಡದ ನುಡಿಗಳು, ಇಂಪಾದ ಹೊಸಹೊಸ ಮುದ್ದು ಪದ್ಯಗಳು, ಸರಳ ಶೈಲಿ, ಭಾವೋದ್ರೇಕ, ಗೀತಪ್ರವಾಹ, ಇವುಗಳ ಹೊಡೆತದಲ್ಲಿ ಏನಾದರೂ ತಪ್ಪುಗಳು ಒಂದುವೇಳೆ ಬಿದ್ದಿದ್ದರೂ ಅವು ಕಾಣದಂತೆ ಮುಚ್ಚಿಹೋಗುವುವು. ನೂರು ದೋಷಗಳಿದ್ದರೂ ಜೀವವಿದ್ದರೆ ಕಾವ್ಯ ಕಾವ್ಯವೇ. ಒಂದು ತಪ್ಪಿಲ್ಲದಿದ್ದರೂ ಜೀವವಿಲ್ಲದ ಕಾವ್ಯ ಕಾವ್ಯವೇ ಅಲ್ಲ. ಪುಟ್ಟಪ್ಪನವರ ಉತ್ತಮ ಕವನಗಳಲ್ಲಿ ಈ ಜೀವವಿದೆ: ಆತ್ಮವಿದೆ: ಇರುವುದರಿಂದ ಅಮೃತತ್ವದ ಸಾರವಿದೆ.

ಸಣ್ಣ ವಯಸ್ಸಿನಲ್ಲಿಯೇ ಪುಟ್ಟಪ್ಪನವರ ಕೀರ್ತಿಲತೆ ಕನ್ನಡನಾಡಿನಲ್ಲೆಲ್ಲಾ ಹಬ್ಬಿಕೊಂಡಿರುವುದು. ಅವರ ಕಾವ್ಯದ ಬಳ್ಳಿ ಕುಡಿ ಹೊಮ್ಮಿ ಹೂವಾದದ್ದು, ಬಲಿಯುತ ಬಲಿಯುತ ಉತ್ಕೃಷ್ಟವಾದ ಫಲಗಳನ್ನು ಬಿಡುವುದೆಂದು ಅವರನ್ನು ಬಲ್ಲವರೆಲ್ಲರ ನಂಬಿಕೆ ಮತ್ತು ಹಾರೈಕೆ. ಅವರ ಜೀವರಥೋತ್ಸವ ಸುಪಥವಾಗಿ ನಡೆಯಲಿ.

**ಬಿ.ಎಂ. ಶ್ರೀಕಂಠಯ್ಯ**

ಮೈಸೂರು

ತಾ॥ ೭-೧-೧೯೩೦

# ಮಳೆಬಿಲ್ಲು

ನೋಡಲ್ಲಿ ಮೂಡಿಹುದು ಮುಗಿಲಿನಲಿ ಮಳೆಬಿಲ್ಲು,
ಬಾನ್ದೇವಿಯಾಂತ ಮಣಿಹಾರದಂತೆ!
ಮೂಕವಿಸ್ಮಿತನಾಗಿ ನಿಲ್ಲು, ಗೆಳೆಯನೆ, ನಿಲ್ಲು,
ಗುಡಿಯೆದುರು ಕೈಮುಗಿವ ಭಕ್ತನಂತೆ!

ಚೆಲುವಿಕೆಯ ಚೈತನ್ಯ ಬಿಲ್ಲಾದುದೆಂಬಂತೆ,
ಮಾಯೆ ಬರೆದಿಹ ಮಧುರ ಚಿತ್ರದಂತೆ,
ಆದಿಕವಿ ಹಾಡುತಿಹ ನಲ್ಗಬ್ಬವೆಂಬಂತೆ,
ವೈಣಿಕನು ಮೀಟುತಿಹ ಬೀಣೆಯಂತೆ!

ಮಳೆಬಿಲ್ಲಿನಂತೆಮ್ಮ ಬಾಳು ಚಣವಾದರೇನು?
ಮಳೆಬಿಲ್ಲಿನಂತೆಯದು ಮಧುರತಮವಲ್ಲವೇನು?
ಮಹಿಮೆಯಾ ಜೀವಿತವದೊಂದು ದಿನವಾದರೇನು?
ಹೀನವಾಗಿಹ ಬಾಳು ಯುಗ ಯುಗಗಳಿದ್ದರೇನು?

# ಗೊಲ್ಲನ ಬಿನ್ನಹ

೧

ಕಾಡಿನ ಕೊಳಲಿದು, ಕಾಡ ಕವಿಯು ನಾ,
ನಾಡಿನ ಜನರೊಲಿದಾಲಿಪುದು.
ಬೃಂದೆಯ ನಂದನ ಕಂದನೆ ಬಂದು
ಗೊಲ್ಲನ ಕೊಳಲಲಿ ನಿಂದಿಹನೆಂದು
ಭಾವಿಸಿ ಮನ್ನಿಸಿ ಲಾಲಿಪುದು.
ಬೇಸರ ಕಳೆಯಲು ಬೇಸಗೆಯಲ್ಲಿ
ತರುಗಳ ತಳಿರಿನ ತಣ್ಣೆಳಲಲ್ಲಿ
ಸುಳಿಸುಳಿದಲೆಯಲು ಬಳಲಿದ ಗಾಳಿ
ಕಂಬಳಿಯೋಡೊಳು ತಂಪೊಳು ತೇಲಿ,
ತುರುಗಳು ಮೆಲುಕನು ಮೇಯುತಿರೆ
ಕರುಗಳು ತಾಯ್ಗಳ ಹಾಯುತಿರೆ

ಪಿಳ್ಳಂಗೋವಿಯನೂದಿದೆ ನಾನು,
ಮರ ಮಿಗಗಳಿಗಾಗೂದಿದೆ ನಾನು!

೨

ಸಿರಿಬನದೇವಿಯ ಬೊಕ್ಕಸದಿಂದ
ಕದ್ದವು ಕೆಲವಿವು ಹಾಡುಗಳು;
ಸುಂದರ ಋತುಗಳ ಸಿರಿಗೈಯಿಂದ
ಸುಲಿದವು ಕೆಲವಿವು ಹಾಡುಗಳು;
ನೇಸರು ಚಂದಿರ ತಾರೆಗಳಿಂದ
ಕೆಲವನು ಭಿಕ್ಷೆಯ ಬೇಡಿದೆನು;
ಬೈಗಿನ ಹೆಣ್ಣನು ಬೆಳಗಿನ ಹೆಣ್ಣನು
ಕಾಡಿಸಿ ಕೆಲವನು ಕೂಡಿದೆನು.
ಹಗಲಿರುಳೆರಡರ ಸಂಗಮದಿಂದ
ಪಡೆದವು ಕಬ್ಬಗಳಲಿ ಕೆಲವು;
ಸುಖದುಃಖಗಳಾಲಿಂಗನದಿಂದ
ಹಡೆದವು ಹಾಡುಗಳಲಿ ಕೆಲವು;
ನೆಚ್ಚಳಿದೊಲುಮೆಯ ಕಂಬನಿ ತೆತ್ತಿಹ
ಭಾವದ ಗೀತೆಗಳಿವು ಕೆಲವು;
ಹುಡುಗಾಟದ ಸಿಂಗಾರದ ಸರಳತೆ
ಬಿನದಕೆ ಹಾಡಿದವಿವು ಕೆಲವು;
ಪರವಿಹವೆರಡರ ನವ ಅಭಿಸಾರವು
ಹೆತ್ತವು ಕೆಲವಿವು ಗಾನಗಳು;
ಜೀವನ ದೇವನ ನವ ಅನುರಾಗವು
ನೀಡಿದವಿವು ಕೆಲ ದಾನಗಳು!

೩

ಸುಗ್ಗಿಯ ಬನದಲಿ ಹಸುರಿನ ಮೇಲೆ
ಹೂವುಗಳಂದದಿ ಕೆಲವನು ಆಯ್ದೆ;
ಮಂಜಿನ ಮಣಿಗಳ ಮಾಗಿಯ ಲೀಲೆ
ಶೋಭಿಸಲದರಿಂದಿನಿತನು ಕೊಯ್ದೆ;
ವಿಪಿನ ವಿಹಂಗಮ ಕಂಠವ ಸೇರಿ
ನುಣ್ಚರಗಳ ಗೆದ್ದೆನು ಬಲು ಹೋರಿ.
ಕಾಮನಬಿಲ್ಲನು ದಾರವ ಮಾಡಿ
ಮೊಳಗನು, ಮಿಂಚನು, ಹನಿಗಳ ಬೇಡಿ

ಹಾಡುಗಳಿನಿತನು ಕೋದಿಹೆನು!
ತುಂಗೆಯ ತೆರೆಗಳ ಚುಂಬನದಿಂದ
ಸಿರಿ ಮಲೆನಾಡಿನ ಸಿರಿ ಮಡಿಲಿಂದ
ಕವನಗಳಿನಿತನು ನೆಯ್ದಿಹೆನು!

೪

ಬನಗಳೆ, ಗಿರಿಗಳೆ, ಹೊಳೆಗಳೆ, ತೊರೆಗಳೆ,
ಕೆರೆಗಳೆ, ಹೊಲಗಳೆ, ತೋಟಗಳೆ;
ತಾಯೇ ತುಂಗೆಯೆ, ಸಿರಿ ಮಲೆನಾಡಿನ
ಪಚ್ಚೆಯ ಪಸುರಿನ ನೋಟಗಳೆ;
ಬನಗಳ ಹೂಗಳ ಸೊಬಗನು ಮೀರುವ
ಚೆಲುವಿನ ಹೊಲಬಿಗ ಬಾಲೆಯರೆ;
ಬನದಲಿ ಬಯಲಲಿ ಹೊಳೆಯಲಿ ಮಳೆಯಲಿ
ನನ್ನೊಡನಾಡಿದ ಬಾಲಕರೆ;
ನಡೆಯಲಿ ಮೆಲ್ಲದೆ, ನುಡಿಯಲಿ ಮೆಲುದನಿ,
ನಿಮ್ಮದು ಮಲೆಗಳ ಸೋದರರೆ;
ರಂಗು, ತಿಮ್ಮು, ಗೌರಿ, ಗಿರಿಜೆ,
ಚಂದದ ಹೆಸರಿನ ಸೋದರರೆ;
ನಿಮ್ಮೊಡನಾಡಿದ ಗುಟ್ಟಿನ ನುಡಿಗಳ
ಬಯಲಿಗೆ ಬೀರುವೆ, ಮನ್ನಿಸಿರಿ!
ನಿಮ್ಮಂತೆಯೆ ನಾ ಹಾಡಲು ಬರದಿರೆ
ಪಾಮರ ಗೋಪನ ಮನ್ನಿಸಿರಿ!
ನಿಮ್ಮೆಲ್ಲರ ಶಿಷ್ಯನು ನಾ, ನಮಿಸುವೆ;
ಆಶೀರ್ವಾದವ ಬೇಡುವೆನು.
ನಿಮ್ಮಗಳೆಲ್ಲರ ಹರಕೆಯ ಬಲವಿರೆ
ಚೆನ್ನಾಗಿಯೆ ನಾ ಹಾಡುವೆನು!
ದನ, ಬನ, ಕಲ್ಗಳು ಮೆಚ್ಚಿದ ಕೊಳಲನು
ರಸಿಕರು ಮೆಚ್ಚದೆ ಮಾಣುವರೆ?
ಕಲ್ಗಳ ಕರಗಿಸಿದಿಂಚರವೆನ್ನದು
ಎದೆಗಳನೊಲಿಸದೆ ಮಾಣುವುದೆ?

೫

ಬನದೊಳು ಮೊದಲೀ ವೇಣುವನಕಟಾ
ಕೇಳಿದ ಕಿವಿಗಳನೊಡೆದೆಯ, ದೇವ?

ಗೊಲ್ಲನ ಕೊಳಲಿಗೆ ಉಸಿರನು ಕೊಟ್ಟಾ
ಎದೆಯಲರೊಂದನು ಕೊಯ್ದೆಯ, ಶಿವನೆ!
ಗೊಲ್ಲನ ಹಾಡನು ಹುರಿದುಂಬಿಸಿದಾ
ತಮ್ಮನ ತಿಮ್ಮುವನೊಯ್ದೆಯ, ಹರಿಯೆ!
ಕೊಳಲನು ಮೆಳೆಯಿಂ ಕೊಯ್ದವ ನೀನೆ,
ಕೊಳಲಿಗೆ ಕಣ್ಗಳ ಸಮೆದನ ನೀನೆ,
ನಚ್ಚಿನ ಮೆಚ್ಚಿನ ಸೋದರನೆ!
ಗೊಲ್ಲನ, ಅಣ್ಣನ ಗಾನವ ಕೇಳಿ
ಹೆಮ್ಮೆಯೊಳುಬ್ಬುತ ಮುದವನು ತಾಳಿ
ನಲಿದೈ ಮುದ್ದಿನ ಸೋದರನೆ!
ಆ ಕಣ್ಣಿನ ಬೆಳಕಳಿದುದೆ ಅಕಟಾ!
ಆ ಬಾಯ್ಬೆಂದುದೆ ಅಕಟಕಟಾ!
ಆ ಎದೆಯೊರತೆಯು ಬತ್ತಿತೆ ಹಾ! ಹಾ!
ಬಾಳಿನ ಜಾತ್ರೆಯು ಮುಗಿದುದೆ ಹಾ!
ಗೊಲ್ಲನು ಕೊಳಲನು ಕೇಳುತ ನಲಿವರು
ಏನನು ಬಲ್ಲರು ಸೋದರನೆ?
ಗೊಲ್ಲನ ಜಸದಲಿ ಅರೆಪಾಲೆಲ್ಲಾ
ನಿನ್ನದೆ, ನಿನ್ನದೆ, ಸೋದರನೆ!

೬

ಕಾಡಿನೊಳಿಬ್ಬರೆ ತಿರುಗಿದೆವಂದು,
ಹೂಗಳ ಕೊಯ್ದೆವು ಹಣ್ಗಳ ತಿಂದು.
ಬಣ್ಣದ ಚಿಟ್ಟೆಗಳನು ಹಿಡಿವಾಗ
ಮುದ್ದಿನ ತಿಮ್ಮುವೆ ಮುಂದಾಳು;
ಕೋಗಿಲೆಗಳ ನಾವಣಕಿಸುವಾಗ
ಅಲ್ಲಿಯು ನಾನೇ ಹಿಂದಾಳು;
ಕಡಿದಾದರೆಗಳನೇರುವ ಸಮಯದಿ,
ಹುತ್ತದ ಜೇನನು ಕೀಳುವ ಸಮಯದಿ,
ಬಿರುಸಿನ ಬೇಟೆಯನಾಡುವ ಸಮಯದಿ,
ಎಲ್ಲಿಯು ತಿಮ್ಮುವೆ ಕೆಚ್ಚಾಳು!
ನನಗಾತನೆ ನಮ್ಮೂರಿನ ಕಣ್ಣು;
ಈಗವನಾದನೆ ಬೇಳಿದ ಮಣ್ಣು!
ನನ್ನೆದೆಗಾತನೆ ಕನ್ನಡಿಯಂತೆ.
ಸೋದರನೆನ್ನಯ ಪಡಿನೆಳಲಂತೆ.

ಕನ್ನಡಿಯೊಡೆದುದು ಬರುಗನಸಂತೆ.
ಮೂಡಿತು ಮನದಲಿ ಮುರಿಯದ ಚಿಂತೆ.
ಒಂದೇ ವೀಣೆಯ ತಂತಿಗಳಂತೆ,
ಕಾಮನಬಿಲ್ಲಿನ ಬಣ್ಣಗಳಂತೆ,
ಹಾಡುವ ಕೊಳಲಿನ ಕಣ್ಣುಗಳಂತೆ
ಕೂಡಿದೆವಾಡಿದೆವೆಲೆ ತಮ್ಮಾ!
ಪರುಷವು ಹರಿದೀ ವೀಣೆಯ ವಾಣಿ.
ಬಡ ಮಳೆಬಿಲ್ಬಗೆಗೊಳಿಸದು ಇಂದು!
ಕಣ್ಣೊಂದಿಲ್ಲದ ಕೊಳಲಿದು ಇಂದು
ಕೊಡದಂದಿನ ಗಾನವ ತಮ್ಮಾ!

೭

ಹೋದವರೆಲ್ಲರ ಊರನು ಸೇರಿದೆ,
ತಮ್ಮಾ, ಗೊಲ್ಲನ ದುಃಖಕೆ ಮಾರಿದೆ!
ನಾ ಸಾವಿಗೆ ಅಂಜುವೆನೆಂದಲ್ಲ,
ಅದರರ್ಥವ ತಿಳಿಯದನೆಂದಲ್ಲ;
ನಿನ್ನಾ ಸಂಗಕೆ ಕೊರಗುವೆನು;
ನಿನ್ನಾ ಪ್ರೇಮಕೆ ಮರುಗುವೆನು!
ಶ್ರೀಗುರುದೇವನ ಪಾದವ ಸೇರಿದೆ;
ಬಲ್ಲೆನು ನಾನೂ ಸೇರುವೆನು.
ಮಾಡುವ ಕೆಲಸವ ಮುಗಿಯಿಸಿ ಬೇಗನೆ
ಬಲ್ಲೆನು ನಾನೂ ಸೇರುವೆನು.
ನಿನ್ನಯ ನೆನಪಿಗೆ ಗೊಲ್ಲನು ನೀಡುವ
ಪ್ರೇಮದ ಗಾನದ ಕಾಣ್ಕೆಯಿದು!
ಶ್ರೀಗುರುದೇವಗೆ ನೀನೆ ನಿವೇದಿಸು
ಕಬ್ಬಿಗನಿಂಚರಗಾಣ್ಕೆಯಿದು!

೨೫-೩-೧೯೨೯

# ಸುಗ್ಗಿ ಬರುತಿದೆ

೧

ಅಡಿಯ ಗೆಜ್ಜೆ ನಡುಗೆ, ಹೆಜ್ಜೆಯಿಡುತ ಸುಗ್ಗಿ ಬರುತಿದೆ!
ಸುಗ್ಗಿ ಬರೆ ಹಿಗ್ಗಿ ತಿರೆ ಸಗ್ಗಸೊಗವ ತರುತಿದೆ!
ಕಣಿವೆಯಿಳಿದು ತೆಮರನೇರಿ,
ತರುಗಳಲ್ಲಿ ತಳಿರ ಹೇರಿ,
ಹೊಸತು ಜೀವಕಳೆಯ ಬೀರಿ
ಸುಗ್ಗಿ ಮೂಡುತಿರುವುದು!
ಬನದ ಬಿನದದಿನಿದು ನಿನದ ಮನದೊಳಾಡುತಿರುವುದು!

೨

ಬಂಡನುಂಡು ದುಂಬಿವಿಂಡು ಹಾಡುತಿಹವು ಹಾರುತ,
ಮತ್ತ ಮಧು ಮಾಸವಿದು ಬನ್ನಿರೆಂದು ಸಾರುತ.
ಜಾರುತಿಹುದು ಮಾಗಿ ಚಳಿ,
ಕುಸುಮಿಸಿರುವ ಲತೆಗಳಲಿ
ಮೆರೆಯುತಿಹವು ಸೊಕ್ಕಿದಳಿ
ಮುಕ್ತಜೀವರಂದದಿ!
ಉಲಿಯೆ ಪಿಕ, ಗಳಪೆ ಶುಕ, ಸುಗ್ಗಿ ಬಂದಿತಂದದಿ!

೩

ಮಾಮರಂಗಳಲಿ ವಿಹಂಗತತಿಯ ನಿಸ್ವನಂಗಳಿಂ,
ತಳಿರ ಸೊಂಪನಲರ ಜೊಂಪನಾಂತ ಬನಬನಂಗಳಿಂ,
ನಲಿವ ಪಚ್ಚೆಯುಡೆಯನುಟ್ಟು,
ಅರಳಿದರಳುಗಳನು ತೊಟ್ಟು,
ಹಿಮದ ಮಣಿಯ ಮಾಲೆಯಿಟ್ಟು
ತಣಿದು ಸೋಲೆ ಕಣ್ಮನಂ
ಕರೆವಳೋವಿ ಬನದ ದೇವಿ ತನ್ನ ಸುಗ್ಗಿಯಾಣ್ಮನಂ!

೪

ಹಾರಿ ಮೆರೆವ ಜಾರಿ ಹರಿವ ತೊರೆಯ ತಂಪು ದಡದೊಳು,
ಮೇಲೆ ಭಾನು ತೇಲೆ, ನಾನು ಕುಳಿತು ಮರದ ಬುಡದೊಳು
ತಿರೆಯ ಸಿರಿಯ ನೋಡುತಿರುವೆ;
ಕುರಿತು ಹಾಡ ಹಾಡುತಿರುವೆ;

ಸೊಬಗಿನೊಡನೆ ಕೂಡುತಿರುವೆ
ಕರಗಿ ಮುಳುಗಿ ತೇಲುತ!
ತೊರೆದ ಗಂಡನೆದುರುಗೊಂಡ ಕೋಮಲೆಯನು ಹೋಲುತ!

೫

ತುರುಗಳೆಲ್ಲ ಮೇಯೆ, ಗೊಲ್ಲ ಬಸಿರಿಮರದ ನೆಳಲಲಿ
ಮಲಗಿಸಿಹನು ಮಧುವನವನು ಮುದವನುಲಿವ ಕೊಳಲಲಿ!
ನಿಂತು ಮೇವ ಮರೆತುಬಿಟ್ಟು,
ಕಿವಿಯನೆರಡ ನೆಟ್ಟಗಿಟ್ಟು,
ಗೊಲ್ಲನೆಡೆಗೆ ದಿಟ್ಟಿಯಿಟ್ಟು
ಬರೆದ ಚಿತ್ರದಂದದಿ
ಗವಿಗಳೆಲ್ಲ ಸವಿಯ ಸೊಲ್ಲನಾಲಿಸಿಹವು ಚಂದದಿ!

೬

ಗಿರಿಗಳಿರಾ, ತೊರೆಗಳಿರಾ, ಎಲೆ ವಿಹಂಗಮಗಳಿರಾ,
ತರುಗಳಿರಾ, ಬನಗಳಿರಾ, ಮಗಮಗಿಪ ಸುಮಗಳಿರಾ,
ಸೊಬಗೆ ನನ್ನಿ ಎಂದು ಸಾರಿ;
ನನ್ನಿಯೆ ಸೊಬಗೆಂದು ತೋರಿ;
ಸೊಗದ ಸೊದೆಯ ತಿರೆಗೆ ಬೀರಿ,
ಒಲ್ಮೆ ಸೊಬಗು ಸೊಗದಲಿ
ಪರಮಪುರುಷನಮಲ ಹರುಷವಿಹುದ ಸಾರಿ ಜಗದಲಿ!

೭

ಮಧುವೆ ಬಾರ! ಮುದವ ತಾರ! ನೀನೆ ದೇವದೂತನು!
ಪರದ ಚಿಂತೆ ಮರೆಯದಂತೆ ಕಳುಹುವನು ವಿಧಾತನು!
ಬುವಿಯ ಸಿಂಗರಿಸುತ ಬಾರ!
ಪರದ ಬೆಳಕನಿಳೆಗೆ ತಾರ!
ಸೊಬಗೆ ಶಿವನು ಎಂದು ಸಾರ!
ಬಾರ ಶಕ್ತಿದಾಯಕ!
ಹಳೆತ ಕೂಡಿ ಹೊಸತು ಮಾಡಿ ಬಾರೆಲೆ ಋತುನಾಯಕ!

೧೦-೧೦-೧೯೨೮

## ಜೋಗುಳ

ಜೋಗುಳವ ಹಾಡೆನ್ನ ಮಲಗಿಸಮ್ಮಾ,
ಕೂಗು ಕರ್ಕಶವಿದನು ತಾಳೆನಮ್ಮಾ!

ಉನ್ಮತ್ತ ಖಡ್ಗಗಳ ಝಣ ಝಣತ್ಕಾರ!
ಬಿಲ್ಲಾಳುಗಳ ಕಠಿನ ಚಾಪಟಂಕಾರ!
ಪೃಥ್ವಿಯಂ ಚುಂಬಿಪರ ಘೋರ ಹಾಕಾರ!
ಹೇ ತಾಯೆ, ಸೈರಿಸೆನು, ರಣವಿದು ಕಠೋರ!

ಒಂದು ಕಡೆ ಸಿಡಿಗುಂಡ ಘೋರ ಢಂಕಾರ!
ಒಂದು ಕಡೆ ಯಂತ್ರಗಳ ತುಚ್ಛ ಚೀತ್ಕಾರ!
ಒಂದು ಕಡೆ ಗಡಿಬಿಡಿಯ ಸಂತೆ ವ್ಯಾಪಾರ!
ಒಂದೆಡೆಯು ಬಿಡುವಿಲ್ಲದೀ ಭೂಮಿ ಘೋರ!

## ನಮ್ಮಾಟ

ನಾನಾಡುವುದ ನೋಡಿ ನೀ ನಲಿವೆ, ಜನನಿ;
ನೀ ನೋಡುವುದ ನೋಡಿಯೇ ನಾ ನಲಿವೆನು!

ನಾನಾಡುವಾಗ ನೀ ನೋಡುವುದ ಮರೆವೆ,
ನೀ ನೋಡುವಾಗ ನಾನಾಡುವುದ ಮರೆವೆ!
ಆದ್ಯಂತವಿಲ್ಲದೀ ಆಟವೇನಮ್ಮ?
ನಾ ಬಳಲೆ, ನೀ ಬಳಲೆ, ಬಳಲಿದನು ಬೊಮ್ಮ!

ಎಂದಿನಿಂದಾರಂಭವಾಗಿಹುದು ಆಟ?
ಇಂದಿಗೂ ಮುಗಿಯದಿದೆ ಈ ನಿನ್ನ ನೋಟ!
ಅಗಣಿತ ಪ್ರಳಯಗಳು ಜಾರಿದುವು, ತಾಯೆ,
ಮುಗಿಯದಿದೆ ನಮ್ಮಾಟವಿದು ಯಾರ ಮಾಯೆ?

## ಮನವೇ, ಬಲು ಜೋಕೆ

ಚೋರರು ಹೃದಯದೊಳಡಗಿಹರು,
ಮನವೇ, ಬಲು ಜೋಕೆ!

ನಿನ್ನೈಶ್ವರ್ಯವನಪಹರಿಸೆ
ಹೊಂಚುತಲಡಗಿಹರು.
ತಿಮಿರವು ಹೃದಯವನಾವರಿಸೆ
ಕನ್ನವ ಹಾಕುವರು.

ಬೆಳಕಲಿ ತಾವನು ಬೇಡುವರು,
ನಿಶೆಯಲಿ ಸುಲಿಗೆಯ ಮಾಡುವರು.
ಚೋರರು ಹೃದಯದೊಳಡಗಿಹರು
ಮನವೇ, ಬಲು ಜೋಕೆ!

೧೯-೧೧-೧೯೨೮

## ನಾವಿಕ

ಕೈಬಿಟ್ಟರೆ ನೀ ಗತಿಯಾರೈ?
ಕಿರುದೋಣಿಯಿದು ಮುಳುಗದೇನೈ?

ಮೇರೆಯನರಿಯದ ಕಡಲಿದು, ಗುರುವೆ,
ಘೋರೆಂದಲೆಗಳು ಏಳುತಿವೆ;
ನೊರೆನೊರೆಯಾಗಿಹ ತೆರೆತೆರೆಯಲ್ಲಿ
ಮೃತ್ಯುವು ನೃತ್ಯವ ಮಾಡುತಿದೆ!

ಉತ್ತರಮುಖಿಯು ಪುಡಿಪುಡಿಯಾಗಿದೆ!
ಗಾಳಿಯು! ಮೋಡವು! ಮಿಂಚುತಿದೆ!
ಕತ್ತಲು ಕವಿದಿದೆ, ಚಿತ್ತವದಳುಕಿದೆ,
ಕಾಣದು ಕಣ್ಣಿಗೆ ಧ್ರುವತಾರೆ!

ಹರಿದಿದೆ ಕಟ್ಟು, ಮುರಿದಿದೆ ಹುಟ್ಟು,
ಬಳಲಿಹೆ, ಬೆದರಿಹೆ ಕಂಗೆಟ್ಟು!
ಸೋದರರನಿಬರು ಮುಳುಗಿದ ಚಿಹ್ನೆಯ
ಬರಿಯ ದೋಣಿಗಳು ತೋರುತಿವೆ!

೨೧-೧೨-೧೯೨೮

## ಕೃಪೆ

ಪಾತಾಳಕಿಳಿದಿಹೆನು,
ಕೈಹಿಡಿದು ಎತ್ತೆನ್ನ
ಕರುಣದಿಂದೆಲೆ ತಾಯೆ, ತಾಯೆ!
ನಿನ್ನ ಮೊಗದಾ ಕ್ಷಣಿಕ
ದರ್ಶನವ ನೋಡುತಿಹೆ-
ನಾದರೂ ನಾನಲ್ಲಿಗೇರಲಾರೆ!

ನಿನ್ನ ನಯನದ ಮಿಂಚು
ನಿನ್ನ ಮುಕುಟದ ಕಾಂತಿ,
'ಬಾ'ಯೆಂದು ಕರೆಯುತಿಹವೆನ್ನ!
ಎನ್ನ ಸಾಧನೆಯೆಲ್ಲ
ವಿಫಲಮಾದುದು ದೇವಿ;
ಬಿದ್ದೇಳುವುದರಲ್ಲೆ ಕಾಲ ಕಳೆದೆ!

ನಿನ್ನ ಕರಗಳನಿಳಿಸ
ಲೆನ್ನ ಯತ್ನಗಳೆಲ್ಲ;
ನಿನ್ನೆದೆಗೆ ನಾನಡರಲಲ್ಲ!
ನೀನೆ ಕೈನೀಡೆನ್ನ
ಮೇಲೆತ್ತಿ ಚುಂಬಿಸೌ;
ನಿನ್ನುರದಿ ನಲಿವೆನಾನಂದದಿಂದ!

೨೭-೯-೧೯೨೭

# ನಟರಾಜ

೧

ಸೂರ್ಯನು ಚಂದ್ರನು ಭೂಮಿಯು ಗ್ರಹಗಳು
ಕಾಣುವ ಕಾಣದ ತಾರೆಗಳು
ಆದಿಯೊಳೆಲ್ಲಾ ಒಂದಾಗಿರಲು,
ಕರಗುತ ಕುದಿಯುತ ಹೊಳೆಯುತಲಿರಲು,
ಮಿಡುಕದೆ ಚಲಿಸದೆ ಮೌನದೊಳಿರಲು;
ಕಾಲದೇಶಗಳು ಮೈಮರೆತಿರಲು,
ಚೇತನ ಜಡದೊಳಗವಿತಿರಲು,
ಸುಂದರ ನದಿ ವನ ಗಿರಿ ಝರಿ ಎಲ್ಲಾ
ಬೆಂಕಿಯ ಮುದ್ದೆಯೊಳಡಗಿರಲು,
ವೀಣೆಯ ಮೀಂಟಲು ತೊಡಗಿದೆ ನೀನು,
ದಿವ್ಯ ಸನಾತನ ವೈಣಿಕನೆ!

೨

ಬೀಣೆಯ ದನಿಯಿಂಚರವನು ಕೇಳಿ
ಕಣ್ದೆರೆದೆದ್ದುದು ಬ್ರಹ್ಮಾಂಡ!
ಹರಿದುದು ಆದಿಯನರಿಯದ ನಿದ್ದೆ;
ಕುಣಿಯಲು ತೊಡಗಿತು ಬೆಂಕಿಯ ಮುದ್ದೆ.
ಕಾಲದೇಶಗಳು ಮೈತಿಳಿದೆದ್ದುವು;
ಚೇತನ ಜಡದಿಂ ಪೊರಮಡಲೆಳಸಿತು,
ಮೆಲ್ಲನೆ ಶಕ್ತಿಯು ಮೂಡಿದುದು!
ವೀಣೆಯ ಮಿಡಿಯುತ ಕುಣಿಯಲು ತೊಡಗಿದೆ
ಮಾಯಾ ನರ್ತಕ ನಟರಾಜ!
ವೀಣೆಯೆ ಭೇರಿಯ ರೂಪವ ತಾಳಿತು;
ನಡುಗಿತು ಭಯದಲಿ ಬ್ರಹ್ಮಾಂಡ!

೩

ಗಿರ್ರನೆ ತಿರುಗುವ ಬೆಂಕಿಯ ಮುದ್ದೆಯು
ಪುಡಿಪುಡಿಯಾಯಿತು ನೃತ್ಯದಲಿ!
ಕಿಡಿಗಳು ಹಬ್ಬುತ ನಾನಾ ದೆಸೆಗೆ
ಕುಣಿದುವು ಭಯದಲಿ ತಾರೆಗಳಾಗಿ;
ರವಿಯಂದದಿ ನಿಂತುದು ಕಿಡಿಯೊಂದು.

ಗ್ರಹಗಳ ರೂಪವನಾಂತುವು ಕೆಲವು
ಭಯದಲಿ ಗುರುವಿಗೆ ಕೈಮುಗಿದು;
ಜಡದಿಂ ನೆಗೆಯಿತು ಸಂತಸದಿಂದ
ಜಯಜಯ ಎನ್ನುತ ಚೇತನವು!
ಭೂಮಿಯು ರವಿಯಿಂ ದೂರಕೆ ಹಾರಿ
ತಿರುಗಲು ತೊಡಗಿತು ಬೆರಗಾಗಿ!

೪

ಭೂಮಿಯ ಮೆಯ್ಯಿಂ ಸಿಡಿದಾ ತಿಂಗಳು
ಬಲಗೊಂಡೆಸೆದುದು ಸೌಮ್ಯದಲಿ!
ಆನಂದಾಖ್ಯೆಯ ತಾಳಿತು ವೀಣೆ;
ಧರ್ಮದ ಹೆಸರನು ಹೊಂದಿತು ಭೇರಿ!
ನಡುಗುವ ಭೂಮಿಯ ಬಳಿ ನೀ ಬಂದೆ
ಚೆಲುವಿನ ಮೋಹದ ರೂಪವ ಧರಿಸಿ,
ಪುಣ್ಯ ಪುರಾತನ ವೈಣಿಕನೆ!
ಬಳಿಯಲಿ ಬೀಣೆಯ ಮೀಟುತ ನಿಂತೆ;
ಉರಿಯುವ ಗೋಳವು ತಂಪಾಯ್ತು!
ತರಳೆಯ ರೂಪದಿ ನಲಿಯುತ ನಗುತ
ಹೊರಹೊಮ್ಮಿದಳೈ ಭೂದೇವಿ!

೫

ವಿಶ್ವದ ಚೆಲುವೇ ಮೈಗೊಂಡಂದದಿ
ನಿನ್ನೆದುರಾಡಿದಳೆಳೆವೆಣ್ಣು!
ಮೋಹಕೆ ಸಿಲುಕಿದೆ, ಹೇ ಸನ್ಯಾಸಿ;
ಚುಂಬಿಸಿಯಾಲಿಂಗಿಸಿ ಮೈಮರೆತೆ!
ಹುಟ್ಟಿದುವಾಗಲೆ ನದಿ ವನ ಖಗ ಮಿಗ;
ಜನಿಸಿದನಾಗಲೆ ತಿರೆಯ ಬಸಿರಿನಲಿ
ನಿನ್ನನೆ ಹೋಲುವ ಮಾನವನು!
ನಿನ್ನಾ ಚೆಲುವಿನ ಕಂದನನೆತ್ತಿ
ಮೋಹದೊಳಾತನನೆದೆಗೊತ್ತಿ
ಮುದ್ದಿಸಿ, ಚುಂಬಿಸಿ, ಕಣ್ಮರೆಯಾದೆ;
ಯೋಗಿಯೆ, ವೈಣಿಕ, ನಟರಾಜ!

೩-೧೨-೧೯೨೮

# ಜಯ ಹೇ ಕರ್ಣಾಟಕ ಮಾತೆ!

ಜಯ್ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ!
ಜಯ್ ಸುಂದರ ನದಿವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ!
ಭೂದೇವಿಯ ಮಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ;
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ!

ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ.
ಹಸುರಿನ ಗಿರಿಗಳ ಸಾಲೆ
ನಿನ್ನಯ ಕೊರಳಿನ ಮಾಲೆ.
ಕಪಿಲ ಪತಂಜಲ ಗೌತಮ ಜಿನನುತ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ!

ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರರಿಹ ದಿವ್ಯಾರಣ್ಯ.
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ
ಕಬ್ಬಿಗರುದಿಸಿದ ಮಂಗಳಧಾಮ,
ಕವಿ ಕೋಗಿಲೆಗಳ ಪುಣ್ಯಾರಾಮ!
ನಾನಕ ರಾಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ!

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನಚ್ಚಿನ ಬೀಡೆ;
ಕೃಷ್ಣ ಶರಾವತಿ ತುಂಗಾ
ಕಾವೇರಿಯ ವರ ರಂಗ.

ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ!

ಸರ್ವ ಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ.
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ.
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ!
ಕನ್ನಡ ನುಡಿ ಕುಣಿದಾಡುವ ಗೇಹ!
ಕನ್ನಡ ತಾಯಿಯ ಮಕ್ಕಳ ದೇಹ!
ಜಯ್ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ!
ಜಯ್ ಸುಂದರ ನದಿವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ!

೭-೧೨-೧೯೨೮

## ಕೋಗಿಲೆ

“ಕೂ ಹೂ! ಕೂಹೂ!” ಎನ್ನುತ ಹಾಡುವ
ಕಿನ್ನರ ಕಂಠದ ಕೋಗಿಲೆಯೆ,
ಮಾವಿನ ತಳಿರೊಳು ದೇವತೆಯಂದದಿ
ನೀನಡಗೇನನು ಹಾಡುತಿಹೆ?
ಹುಲ್ಲೆಯ ತೆರದಲಿ ನಲಿಯುತ ಹಸುರಲಿ
ಮೆಲ್ಲನೆ ಬನದಲಿ ಬರುವಾಗ
“ಕೂ ಹೂ! ಕೂ ಹೂ!” ಮೋಹದ ಗಾನದಿ
ದೇಹದಿ ಬಾಲ್ಯವ ನೀ ತರುವೆ!

ದೇವರ ಪೂಜೆಗೆ ಹೂವನು ಕೊಯ್ಯಲು
ಹೂವಿನ ತೋಟಕೆ ನಾ ಬರಲು,
ಅಂದಿನ ದಿನಗಳ ಹಿಂದಕೆ ಕರೆಯುವೆ,
ಚಂದದ ಕಂಠದ ಕೋಗಿಲೆಯೆ!

ಲೋಕಕೆ ಬಂದಿಹ ನಾಕದ ದೂತನೆ,
ಅಭಿನವ ಮಧುವನ ವೈಣಿಕನೆ,
ಎಚ್ಚರಿಸೆಚ್ಚರಿಸೊರಗಿದ ಜಡರನು,
ನೆಚ್ಚನು ನೆಡು, ವೈತಾಳಿಕನೆ!

ಮರಗಳ ಗಬ್ಬದೊಳಡಗಿಹ ಚೆಲುವಿನ
ಬಣ್ಣದ ತಳಿರನು ಬರಹೇಳು.
ಬಳ್ಳಿಯ ಮಡಿಲಲಿ ಹೊಂಚುತಲೊರಗಿಹ
ಮೊಗ್ಗುಗಳನು ಕರೆ, ಬರಹೇಳು!

ಇಂದಿರ ಬಿಲ್ಲಿನ ಸುಂದರ ರಂಗಿನ
ಗೊಂಚಲು ಹಣ್ಗಳ ತರಹೇಳು.
ಚಂಚಲ ಕಂಠದ ಸಂಚರಿಪಿಮ್ಮಡಿ-
ಯಿಂಚರವಾಣತಿ! ಬರಹೇಳು!

ಮಲ್ಲಿಗೆ, ಸಂಪಗೆ, ಹಿಪ್ಪೆಯು, ನಂದಿಯು,
ಕೇದಗೆ ಹೂಗಳ ಬರಹೇಳು;
ಕಂಪಿನ ಹೊರೆಯನು ತಲೆಯೊಳು ಹೊತ್ತು
ಮೇದಿನಿಗೀಯಲು ತರಹೇಳು!

ದುಂಬಿಗಳಳಿಗಳ ಮೊರೆಯುವ ಮಂದೆಯ
ಬನ್ನಿರಿ ಬಂಡುಣಲೆಂದೂಳು.
ಗಿಳಿ ಲಾವುಗೆ ಗೊರವಂಕಗಳಾಳಿಯ
ಮೇಳವ ಕಟ್ಟಲು ಕರೆ, ಹೇಳು!

ನಲ್ಲನ ಕೂಡುವ ನಲ್ಲೆಯ ಕರೆಯೈ
ತಳಿತಿಹ ಮಾಮರದುಯ್ಯಲೆಗೆ,
ನವ ಚೈತನ್ಯದ, ನವ ಸೌಂದರ್ಯದ,
ನವ ಮಧು ನಿಧುವನದುಯ್ಯಲೆಗೆ!

ಬೆಡಗಿನ ಬಿಂಕದ ಹುಡುಗಿಯ ತೆರದಲಿ
ಬನವಿರೆ ಹೊಸ ವೈಯಾರದಲಿ,
ಮಧುರ ವಿಹಂಗಮ ಕವಿಯೇ, ಕೋಗಿಲೆ,
ಕವಿಯನು ಕರೆ ಸುರಗಾನದಲಿ!

“ತೊಲಗಿತು ಮಾಗಿ” ಎನ್ನುತ ಕೂಗಿ
ಮುಕ್ತಿಯ ಸಾರ್ರೈ, ಸ್ವರಯೋಗಿ!
“ಬಂದಿತು ಸುಗ್ಗಿ” ಎನ್ನುತ ಹಿಗ್ಗಿ,
ಬಗ್ಗಿಸು, ಬಗ್ಗಿಸು, ರಸಯೋಗಿ!

## ದಾರಿ ತೋರೆನಗೆ

ದಾರಿ ತೋರೆನಗೆ, ಗುರುವೇ,
ದಾರಿ ತೋರೆನಗೆ.

ಕವಲೊಡೆದ ಹಾದಿಗಳು;
ಕವಿದಿಹುದು ಕತ್ತಲೆಯು;
ಕಿವಿಗೊಟ್ಟು ಕೇಳಿದರೆ
ಕರೆವ ದನಿಯಿಲ್ಲ;
ಕಣ್ಣಿಟ್ಟು ನೋಡಿದರೆ
ಹೊಳೆವ ಸೊಡರಿಲ್ಲ!

ತಿಮಿರವನು ಕುಡಿ ಕುಡಿದು
ಮುಳುಗಿಹವು ಮೂರ್ಛೆಯಲಿ
ಬನ ಬಯಲು ಬುವಿ ಬಾನು
ಹೊಳೆ ಕೆರೆಗಳೆಲ್ಲ:
ಭೀಕರದ ಮೌನದಲಿ
ಬಗೆಹರಿವುದಿಲ್ಲ!

ಹೆಪ್ಪುಗಟ್ಟಿಹುದಿರುಳು!
ಮರಳಿನಲಿ ಕೆಸರಿನಲಿ
ಮುಂದೆ ತೆರಳಿದ ಜನರ
ಹೆಜ್ಜೆಗಳ ಕಾಣೆ;
ಕತ್ತಲಲಿ ಕೈಹಿಡಿದು
ಕಾಯುವರ ಕಾಣೆ!

೩-೧-೧೯೨೯

# ತಾರ್ಕಿಕ

ಬಿತ್ತರದ ತಿಳಿಯಾಳ ಬಾಂದಳದಿ ನಡುವಗಲ
ಬೆಂಗದಿರನುರಿಬಿಸಿಲು ಚುಚ್ಚುತಿಹುದು;
ಕಾಯಿಸಿದ ಕಬ್ಬಿಣದ ಕಾವಲಿಯ ತೆರದಿಂದೆ
ಹಬ್ಬಿ ಮರುಭೂಮಿಯುರಿ ಹೆಚ್ಚುತಿಹುದು!
ತಂಪಿಲ್ಲ, ಸೊಂಪಿಲ್ಲ; ದನಿಯಿಲ್ಲ, ಹನಿಯಿಲ್ಲ;
ಬಿಸಿಯುಸಿರು ಬೆಂಕಿಯನೆ ಬೀಸುತಿಹುದು!
ಸಾವು ಸದ್ದುಳಿದಲೆವ ಸುಡುಗಾಡಿನಂದದಲಿ
ಬಾಯಿರದ ಬೆದರಿಕೆಯು ತೊಳಲುತಿಹುದು!
ಸುಡುವ ಮರಳಿನ ಮೇಲೆ ಕುಳಿತ ಇವನಾರು?
ಮುಡಿಗೆದರಿ ಮರುಳಿವನು ಮಾಡುತಿಹುದೇನು?
ಗಣಿಸದಾತಪದುರಿಯನೇಂ ಗುಣಿಸುತಿಹನು?
ಮರಳು ಕಣಗಳ ಮುದದಿಯೊಲಿದೆಣಿಸುತಿಹನು!

೮-೩-೧೯೨೯

# ಗೊಲ್ಲನ ಗಾಯತ್ರಿ

ಗರ್ವದಿಂದೆನ್ನ ಶಿರ ನಿಮಿರಿ ನಿಲ್ಲಲು, ದೇವ,
ನಿನ್ನ ಗದೆಯಾಘಾತ ಬಂದೆರಗಲಿ.
ದುಃಖದಿಂದೆನ್ನೆದೆಯು ನೊಂದು ಮೊರೆಯಿಡೆ, ಗುರುವೆ,
ನಿನ್ನೊಲ್ಮೆ ಬಂದದನು ಸಂತೈಸಲಿ.
ಮಾಯಮುಕುರದ ಮೋಹದಲಿ ಮನವು ಮುಳುಗುತಿರೆ
ನಿನ್ನ ಕೈ ಕನ್ನಡಿಯ ಪುಡಿಗೈಯಲಿ.
ಸರ್ವಜ್ಞನೆಂದೆದೆಯು ಸಂಕುಚಿತವಾಗುತಿರೆ
ನಿನ್ನ ಮೈಮೆಯ ಬೆಳಕು ಮೈದೋರಲಿ.
ಸಂದೇಹವೈತಂದು ಬಗೆಯ ಕದಡಲು, ದೊರೆಯೆ,
ನಿನ್ನ ನುಣ್ಚರ ಮೂಡಿ ಪರಿಹರಿಸಲಿ.
ನೂರಾರು ಹಾದಿಗಳ ಸಂಗಮದಿ ನಿಶೆ ಕವಿಯೆ
ನಿನ್ನ ಕಣ್ಬೆಳಕೆನ್ನ ಕಣ್ದೆರೆಯಲಿ.
ಒಣ ಕಟ್ಟಳೆಯ ಶಿಶಿರದಲಿ ಜೀವತರು ಕೊರಗೆ
ನಿನ್ನ ಚೇತನ ಚೈತ್ರದೆಲರೂದಲಿ.

ಜೀವ ದಾವಾಗ್ನಿಯಲಿ ಬೆಂದು ಬೇಗುದಿಗೈಯೆ
ನಿನ್ನ ಕರುಣಾಮೃತದ ಸರಿ ಸುರಿಯಲಿ.
ನಲ್ಮೆಯಿಂದೆನ್ನ ಬಲ್ಮೆಯ ನಿನ್ನ ಚಿತ್ತದಲಿ
ಶರಣುಗೈಯುವ ಬಲ್ಮೆಯೆನಗೆ ಬರಲಿ.
ಸಾವಿನಲಿ ಬಾಳಿನಲಿ ಸುಖ ದುಃಖವೆರಡರಲಿ
ನಿನ್ನತುಳ ಶಾಂತಿಯೆನ್ನೆದೆಯೊಳಿರಲಿ.

೧೦-೩-೧೯೨೯

## ಎಲ್ಲಿಹೆ?

ಯಾರನು ಕೇಳಲಿ ನಾ, ಎಲ್ಲಿಹೆ ನೀನೆಂದು!
ಯಾರನು ಕೇಳಿದರರಿಯೆನು ಎಂಬರು; ಯಾರೂ ಅರಿಯರು ನಿನ್ನ!
ಕೇಳಲು ನಾ ಭೂದೇವಿಯನು ನೀಲಾಕಾಶವ ತೋರಿದಳು.
ಕೇಳಲು ದಿವ್ಯ ಸಮೀರಣನ ಕೇಳೆಂದನಲನ ತೋರಿದನು.
ಕೇಳಲು ಚೈತ್ರದ ಹೂಗಳನು 'ಕೇಳು ವಸಂತನ ನೀನರಿವೆ' ಎನ್ನುತ ನಲಿನಲಿದಗಲಿದುವು;
ಕೇಳೆ, ವಸಂತನು ತಾನರಿಯ. ತಾರಾಗಣಗಳ ನಾ ಕೇಳೆ ಚಂದ್ರನ ಕೇಳೆಂದಾಡಿದುವು.
ರಾತ್ರಿಯ ಕೇಳಲು ತೋರಿದಳು ಹಗಲನು ಕೇಳ್ಕೆ ನೀನೆಂದು. ಗಗನವ ಕೇಳಲು ಮಾತಿಲ್ಲ.
ಶಿಖಿಯೋ ಮೂಕನು ನುಡಿಯಿಲ್ಲ. ಕೇಳೆ ಮಹಾಂಭೋಧಿಯ ನಾನು ಪೇಳವು ಮೊರೆವ ತರಂಗಾಳಿ.
ಹೃದಯವ ಕೇಳಲು 'ಸುಮ್ಮನಿರು, ಎಲ್ಲೆಲ್ಲಿಯು ಇಹ'ನೆನ್ನುವುದು.
ಯಾರನು ಕೇಳಲಿ ನಾ; ಎಲ್ಲಿಹೆ ನೀನೆಂದು!
ಯಾರನು ಕೇಳಿದರರಿಯೆನು ಎಂಬರು; ಯಾರೂ ಅರಿಯರು ನಿನ್ನ!

## ಜೀವ ರಥೋತ್ಸವ

ಜೀವ ರಥೋತ್ಸವವಿದನಣಕಿಸದಿರು,
ಎಲೆ ಸಂನ್ಯಾಸಿ!
ಸಾರಥಿಯನು ನೋಡಾದರು ಬಾ,
ತೇರನು ಎಳೆಯುವ ಸಂನ್ಯಾಸಿ!
ದುಷ್ಟವು ಎಂದಿದ ಜರೆಯದಿರು,
ಕಷ್ಟವು ಎಂದಿದ ತೊರೆಯದಿರು;
ಉತ್ಸವದೊಳಗಿಹುದೊಂದರ್ಥ.
ಸಂನ್ಯಾಸೀ, ಅಲ್ಲವೊ ಇದು ವ್ಯರ್ಥ!
ಓಡುವೆ ಎಲ್ಲಿಗೆ ಸಂನ್ಯಾಸಿ!

ಆಗುವೆಯಾ ನೀ ಶೂನ್ಯ ನಿವಾಸಿ?
ಸಾರಥಿ ಬಲ್ಲನು ಸತ್ಪಥವ,
ಕುಳಿತಿಹನಾತನೆ ನಡೆಸಲು ರಥವ!
ಸುಮ್ಮನೆ ಏತಕೆ ನಿಲ್ಲುವೆ ದೂರ?
ಸಂನ್ಯಾಸೀ, ಬಾ, ಎಳೆಯುವ ತೇರ!
ಜೀವ ರಥೋತ್ಸವವಿದನಣಕಿಸದಿರು,
ಎಲೆ ಸಂನ್ಯಾಸಿ!
ಸಾರಥಿಯನು ನೋಡಾದರು ಬಾ,
ತೇರನು ಎಳೆಯುವ ಸಂನ್ಯಾಸಿ!

೧೯-೧೧-೧೯೨೮

## ಭಾರತ ಜನನಿಗೆ

ಭಾರತಾಂಬೆಯೆ, ಜನಿಸಿ ನಿನ್ನೊಳು ಧನ್ಯನಾದೆನು, ದೇವಿಯೇ.
ನಿನ್ನ ಪ್ರೇಮದಿ ಬೆಳೆದು ಜೀವವು ಮಾನ್ಯವಾದುದು, ತಾಯಿಯೆ.

ರಾಣಿಯಂದದಿ ಮೆರೆಯೆ ಸಿರಿತನವಿಹುದೊ ಏನೋ ಅರಿಯೆನು;
ಕಾಮಧೇನುವಿನಂತೆ ಬಯಸಿದ ಫಲವ ಕೊಡುವೆಯೊ ಅರಿಯೆನು;
ಎನ್ನ ಅಂಗಗಳೆಲ್ಲವು ನಿನ್ನ ಸೊಂಪನು ಬಲ್ಲವು;
ನಿನ್ನ ಸಂಗವೆ ಪರಮಮಂಗಳವೆಂಬುದಿನಿತನು ಮರೆಯೆನು!

ಕುಂದುಕೊರತೆಗಳಿಹವು ನಿನ್ನೊಳು ಎಂಬುವಳಲನು ಬಲ್ಲೆನು,
ಹಿಂದಕುಳಿದವಳೆಂಬ ನಿಂದೆಯ ಸಹಿಸಿ ನೊಂದಿಹೆ ಬಲ್ಲೆನು;
ಆದರೊಲಿಯೆನು ಅನ್ಯರ, ಚೆನ್ನವೊಲಿದಿಹ ಧನ್ಯರ;
ಕುಂದುಕೊರತೆಗಳಿರಲಿ, ಮಹಿಮಳು ನೀನೆ, ಅನ್ಯರನೊಲ್ಲೆನು.

ನಿನ್ನ ಕಂಗಳ ಪುಣ್ಯಕಾಂತಿಯೊಳೆನ್ನ ಕಂಗಳ ತೆರೆದೆನು;
ನಿನ್ನ ಅಂಕದ ಮಂಗಳಾಂಗಣದಲ್ಲಿ ನಲಿಯುತ ಮೆರೆದೆನು;
ನಿನ್ನ ಮೈಮೆಯ ಬರೆವೆನು; ನಿನ್ನ ಹೆಸರನೆ ಕರೆವೆನು;
ನಿನ್ನ ಸೇವೆಯೊಳಳಿವ ಭಾಗ್ಯಕೆ ಸಕಲ ಭಾಗ್ಯವ ತೊರೆವೆನು!

೨೮-೪-೧೯೨೭

## ಉದಯ

ನೋಡು ತಳಿತ ತಳಿರ ನಡುವೆ ಅರುಣ ಕಿರಣ ಸರಿಯ ಸುರಿಸಿ ಉದಯ ರವಿಯು ಮೆರೆವನು; ಕವಿಯ ಮನವ ಮೋಹಿಸುತ್ತ ಮೌನವಾಗಿ ಕರೆವನು! ಬಿಳಿಯ ಮುಗಿಲ ಬಳವಾಗತ- ನರುಣ ಪೆಂಪ ಪಡೆಯ ಬಯಸಿ ಸುತ್ತಮುತ್ತಲಿರುವುವು; ಮೂಡುದೆಸೆಯ ಹೆಣ್ಣುಮಗಳು ನಗೆಯ ತೋರುತಿರುವಳು! ಮನೆಗೆ ಬಂದ ಗೆಳೆಯರಂತೆ ರವಿಯ ಕಿರಣಗಳನು ಧರೆಯು ಉಪಚರಿಸುತಲಿರುವಳು; ವಿಹಗಕೋಟಿಯುಲಿಯ ಬೀರಿ ಮುಗುದತನವ ತರುವುವು! ಪಸರಿಸಿರುವ ಪಸಲೆಯಿಂದ ತಳಿತು ನಲಿವ ಬನಗಳಿಂದ ತೆರಳದಿರೆಲೆ ಉದಯವೆ! ಇಹಕೆ ಬರುವ ಪರದ ಸೊಬಗ ತೊರೆಯದಿರೆಲೆ ಹೃದಯವೆ! ೧೩-೧೨-೧೯೨೯

## ಮೋಹಿಸುವ ಸಂಜೆ

ಮಳೆಯಿಳಿದು ನಿಂತಿಹುದು: ಹೊಸ ಕಂಪು ಹೊಸ ತಂಪು ಹೊಸ ಸೊಂಪು ಹೊಸ ಪೆಂಪು ತೋರುತಿಹುದು; ಬಯಲಿಗಾಶಿಸಿ ಎದೆಯು ಹಾರುತಿಹುದು! ತಂಗಾಳಿ ಬೀಸುತಿದೆ; ಕೋಗಿಲೆಯು ಕೂಗುತಿದೆ; ಬೈಗುಗೆಂಪಂಬರದಿ ರಂಜಿಸಿಹುದು; ತಿರೆಯೆಲ್ಲವಂ ಸಂಜೆ ಮೋಹಿಸಿಹುದು! ಬೈಗುಗೆಂಪೋಕುಳಿಯ ತೆರೆತೆರೆಗೆ ಹರಡಿಹುದು; ಹಸುರು ತಲೆದೂಗುವುದು ಕೆರೆಯಂಚಲಿ: ಗೂಡ ಬಿಡು, ಬಾ ಹೊರಗೆ, “ಗೀತೆ”ಯಿರಲಿ! ಬಿದಿರಮೆಳೆಯಲಿ ಗಾಳಿ ತವರೂರ ಕತೆಗಳನು ಮೊರೆಯುತ್ತಲಲೆಯುತ್ತ ಸುಳಿಸುಳಿವುದು! ಸೊಬಗಿನಲಿ “ಗೀತೆ”ಯನು ಮತಿ ತಿಳಿವುದು! ಮೋಡಗಳ ಸಿರಿಗೆಂಪು ಪಂಡಿತರ ಪಾಂಡಿತ್ಯ ವೆಲ್ಲಮಂ ಬೋಧಿಪುದು; ಮೀರಿರುವುದು! ಸೊಬಗಿನಲಿ ಶಿವನೆಂದು ಸಾರುತಿಹುದು! ನಿರತೆಯಂಬುಧಿಯಲ್ಲಿ ಮುಳುಗು ಬಾ, ತೇಲು ಬಾ, ಕರಗು ಬಾ; ಬಾ ನೋಡು ಪರಮಾತ್ಮನಂ! ಬಾ, ಹೊರಗೆ; ಗೂಡ ಬಿಡು, ಬಾ, ಬೇಗ ಬಾ! ೧೪-೭-೧೯೨೮

## ಎಂತಿಹೆ?

ಯಾರನು ಕೇಳಲಿ ನಾ, ಎಂತಿಹೆ ನೀನೆಂದು! ಯಾರನು ಕೇಳಿದರೊಂದನೆ ಪೇಳುವ- ರಾರೂ ಅರಿಯರು ನಿನ್ನ! ಕೋಮಲನೆಂದುವು ಕುಸುಮಗಳು ಶ್ಯಾಮಲನೆಂದುವು ಕಾಡುಗಳು. ಸುಂದರನೆಂದಳು ಧಾರಿಣಿಯು ಅಹುದೆಂದರು ಶಶಿ ಭಾಸ್ಕರರು. ಗಗನವ ಕೇಳಲು ನೀಲಾಂಗ ಮುಗಿಲನು ಕೇಳಲು ಕೃಷ್ಣಾಂಗ. ಸೃಷ್ಟಿಯ ಕೇಳಲು ಆನಂದ ಪ್ರಳಯವ ಕೇಳಲು ಭೈರವನು. ನಿಶೆ-ದಿನ ಕರಿ-ಬಿಳಿದೆಂಬುವರು. ರಾಗವು ವೇಗವು ಸರ್ವರಿಗೆ. ದೊಡ್ಡವನವನತಿ ಪರಮಾಣು ಏಕನನೇಕನು ಎಂಬುವರು. ನಿತ್ಯನನಂತನು ಬ್ರಹ್ಮಾಂಡ ಸತ್ಯನಚಿಂತ್ಯ ವಿರಾಟನು ತಾ- ನೆಂಬುವುವಾಗಮ ವೇದಾಂತ. ಹೃದಯವ ಕೇಳಲು ‘ಸುಮ್ಮನಿರು, ವರ್ಣನೆಗಸದಳನಾಗಿಹನು, ಭಕ್ತಿಯೆ ಶಕ್ತಿಯು’ ಎನುವುದು. ಯಾರನು ಕೇಳಲಿ ನಾ, ಎಂತಿಹೆ ನೀನೆಂದು! ಯಾರನು ಕೇಳಿದರೊಂದನೆ ಪೇಳುವ- ರಾರೂ ಅರಿಯರು ನಿನ್ನ!

## ಅಭಯ

ತಡವುತಿದ್ದರು ನಾನು, ಎಡವಿ ಬಿದ್ದರು ನಾನು, ಬಲ್ಲೆನದು ನಿನ್ನಂಕಪೀಠದಾ ಮೇಲೆಯೆಂದು! ಎಷ್ಟು ಕುಣಿದರು ಮರೆತು, ಎಷ್ಟು ಅಲೆದರು ಬರಿದೆ, ಬಲ್ಲೆ ನಾನಿನ್ನ ಕೈಯೊಳು ಸದಾ ಭದ್ರವೆಂದು! ಕನಸ ಕಂಡೆನು ನಾನು ನಿನ್ನಂಕದಿಂ ಜಾರಿ ಘೋರ ವಿಪಿನದ ಮಸಣ ಮೋನದಲಿ ಚಲಿಸುವಂತೆ; ಚೀರಿ ಕೂಗಲು, ತಾಯೆ, ನೀನೆನ್ನನೆಬ್ಬಿಸಿದೆ! ಕನಸ ಕಾನನವಳಿದು ನಿನ್ನಂಕಪೀಠಮಾಯ್ತು! ಎದ್ದರೂ ನಿನ್ನಂಕ! ಬಿದ್ದರೂ

ನಿನ್ನಂಕ! ಪ್ರೇಮಕರಬದ್ಧನಾದೆನಗೆ ಭಯಮೆಂದರೇನು? ಒಂದಂಕದಿಂ ನೆಗೆಯೆ ಮತ್ತೊಂದಕಿಳಿವೆನೌ! ಭಯಮೆಂಬುದಾಧಾರಮಿಲ್ಲದಿಹ ಮಾಯೆ, ತಾಯೆ! ೧೬-೯-೧೯೧೬

## ಕೌಮುದಿ

ಮೂಡುತಿಹನು ಚಂದಿರಂ, ಚೆಲುವಿನಿಂದಿರಂ; ಪೂರ್ವ ನೀಲನಭವ ಬೆಳಗಿ ಬಹನು ಸೊಬಗ ಮಂದಿರಂ. ಶಿಖಿಯ ಚೆಂಡಿನಂದದಿಂ ಶಶಿಯು ರಂಜಿಪಂ: ತೊಳಗಿ ಮಂದಹಾಸದಿಂದ ಸರಿಯುವನು ದಿಗಂತದಿಂ. ಸುರಿದು ಕಾಂತಿವರ್ಷವಂ, ಶಾಂತಿಹರ್ಷವಂ, ಧರೆಯ ಮೋಹಿಸುತ್ತ ನಲಿದು ನೀಲನಭವನೇರುವಂ. ಪ್ರಕೃತಿ ಪರಮ ಮೋಹದಿಂ- ದೊಲಿವುದಿಂದುವಂ; ರಮ್ಯಕಾಂತಿ ಚುಂಬಿಸುತಿದೆ ವನಸರೋವರಂಗಳಂ. ಭೇದಿಪುದು ರಹಸ್ಯಮಂ ಪರಮಸೌಂದರಂ; ಸೊಬಗೆ ದಿವ್ಯಪುರುಷನಿಂದ ಬಂದ ರಮ್ಯ ಹಿಮಕರಂ! ನಲಿವ ತಳಿರು ಸುಮಗಳಂ ಲಲಿತ ಶಿಖರಮಂ ಇಂದು ಕಾಂತಿ ಬಂಧಿಸಿಹುದು ದಿವ್ಯ ಸುಧಾನಂದದಿಂ! ಸೊಬಗೆ ಪರಮ ಸಂತಸಂ, ಸುಖವೆ ಸೌಂದರಂ; ವಿಶ್ವಲೀಲೆಯಿಂದ ಜನಿಪ ನೋಟವಿದು ಮನೋಹರಂ! ಕೌಮುದಿಯು ವಿಲಾಸದಿಂ ರಚಿಸಿ ಸೇತುವಂ ಪರವನಿಹಕೆ ಬಂಧಿಸಿಹುದು ತೋರಿ ವಿಶ್ವದೈಕ್ಯಮಂ!

## ಸಗ್ಗದ ಬಾಗಿಲು

ಸಗ್ಗದ ಬಾಗಿಲು ಎಲ್ಲಿಹುದಣ್ಣಾ? ನುಗ್ಗಿದೆನೆಲ್ಲಿಯು ಸಿಗಲಿಲ್ಲಣ್ಣಾ! ಕಾಶಿಗೆ ಹೋದೆನು ಅಲ್ಲಿಲ್ಲಣ್ಣಾ ಮುಳುಗಿದೆ ಗಂಗೆಯೊಳಲ್ಲಿಲ್ಲಣ್ಣಾ; ಘಣಘಣ ಘಣಘಣ ಗಂಟೆಯ ಬಾರಿಸಿ, ಮಣಮಣ ಮಣಮಣ ಮಂತ್ರವ ಹೇಳಿದೆ, ಪೂಜೆಯ ಮಾಡಿದೆ, ಧೂಪವ ಹಾಕಿದೆ, ದಕ್ಷಿಣೆಯಿತ್ತೆನು ಹಾರುವರಾಳಿಗೆ; ಪಂಡಿತವರ್ಯರ ಸೇವೆಯ ಮಾಡಿದೆ, ವೇದವನೋದಿದೆ, ತರ್ಕವ ಮಾಡಿದೆ, ಸಗ್ಗದ ಬಾಗಿಲು ಎಲ್ಲಿಯು ಇಲ್ಲ; ನುಗ್ಗಿದ ಕಡೆ ತಲೆ ತಾಗದೆ ಇಲ್ಲ! ಸಗ್ಗದ ಬಾಗಿಲು ಎಲ್ಲಿಹುದಣ್ಣಾ? ನುಗ್ಗಿದೆನೆಲ್ಲಿಯು ಸಿಗಲಿಲ್ಲಣ್ಣಾ! ಸಗ್ಗದ ಬಾಗಿಲು ಅಲ್ಲಿಹುದಣ್ಣಾ! ನುಗ್ಗಿದರಲ್ಲೇ ತೆರೆಯುವುದಣ್ಣಾ! ಹಕ್ಕಿಯ 'ಟುವ್ವಿ'ಯೊಳವಿತಿದೆಯಣ್ಣಾ, ಹೂವಿನ ಬಣ್ಣದೊಳಡಗಿದೆಯಣ್ಣಾ. ದುಡಿಯುವ ರೈತನ ನೇಗಿಲೊಳಡಗಿದೆ, ಕಡಿಯುವ ಕೂಲಿಯ ಕತ್ತಿಯೊಳಡಗಿದೆ! ನೇಗಿಲ ಗೆರೆಯೇ ಸಗ್ಗದ ಹಾದಿ, ಕರ್ಮವೆ ಬಾಗಿಲಿಗೊಯ್ಯುವ ಬೀದಿ; ಹಕ್ಕಿಗಳುಲಿಯಲು, ಹೂವುಗಳರಳಲು, ತಾಯಿಯು ಕಂದನ ಮುದ್ದಿಸಿ ನಲಿಯಲು, ಬರೆಯಲು ವೇದವ ರೈತನ ನೇಗಿಲು, ತೆರೆವುದು ದಿನದಿನ ಸಗ್ಗದ ಬಾಗಿಲು! ಸಗ್ಗದ ಬಾಗಿಲು ಅಲ್ಲಿಹುದಣ್ಣಾ! ನುಗ್ಗಿದರಲ್ಲೇ ತೆರೆಯುವುದಣ್ಣಾ! ೧೭-೮-೧೯೧೭

## ಸತ್ಯ ಮತ್ತು ಸೌಂದರ್ಯ

ಹೂವಿನ ಸೊಬಗನು ನೋಡುತ ನೀನು ಕೋಮಲವೆನ್ನುತ ಮುತ್ತಿಡುವೆ; ಹೂವಿನ ಪೆಂಪಿಗೆ ಬಾಳನು ಕೊಟ್ಟಾ ಮೊಳಕೆಯ ಗೋಳನು ನೀನರಿಯೆ! ಬುವಿಯನು ನೋಡುತ ಸೊಬಗಿಗೆ ಮೆಚ್ಚಿ, ಕವಿಯೇ, ಕವಿತೆಯ ವಿರಚಿಸುವೆ; ಬುವಿಯಾನಂದಕೆ ಜೀವವನಿತ್ತಾ ಕರ್ತನ ವೇದನೆಯರಿತಿಹೆಯ? ಯುಗ ಯುಗ ಯುಗಗಳ ಯಾತನೆಯಿಂದ ಜನಿಸಿತು ನಲಿವೀ ಬ್ರಹ್ಮಾಂಡ; ನಲಿಯುವ ಒಂದೊಂದಲರಿನ ಹೃದಯದಿ ಬ್ರಹ್ಮವು ಮೌನದಿ ನರಳುತಿದೆ! ಮುಂದಕೆ ನೋಡುವ ಕವಿಗಳ ಕಣ್ಣಿಗೆ ಬ್ರಹ್ಮವು ಹರ್ಷದಿ ಕುಣಿಯುತಿದೆ; ಹಿಂದಕೆ ನೋಡುವ ಋಷಿಗಳ ಕಣ್ಣಿಗೆ ಯಾತನೆಯಿಂದದು ಹೊರಳುತಿದೆ! ೧-೪-೧೯೧೭

## ಆತ್ಮಸ್ವಾತಂತ್ರ್ಯ

ದೊರೆಯು ಬಂದನತಿಥಿಯಾಗಿ ತೆರೆಯಲಿಲ್ಲ ಬಾಗಿಲ; ಮರೆತು ಮಲಗಿದೆ! ಚರರ ಕಳುಹಲಿಲ್ಲವವನು ಕರೆದು ಕೂಗಲಿಲ್ಲವು; ಬರಿದೆ ಕಾದನು! ದೊರೆಯತನವವನುಳಿದು ತಾನು ಪರಮ ಗೆಳೆಯನಂದದಿ ದೊರೆಯು ಬಂದನು; ಇರಿಸಿ ತನ್ನ ಭಟರ ದೂರ ತೊರೆದು ತನ್ನ ದರ್ಪವ ದೊರೆಯು ಬಂದನು! ರಾಜಭಟರ ಕಳುಹಲಿಲ್ಲ, ರಾಜನಾಜ್ಞೆಯಿಲ್ಲವು; ಬರಿದೆ ಕಾದನು! ಅರಸನಾಗಿ ಬಂದು ತಾನು ಚರರ ಕಳುಹಿಸಿರ್ದೊಡೆ ತೆರೆಯುತಿರ್ದರು! ಬಾಗಿಲನ್ನು ತೆರೆದು ನೋಡ- ಲಾಗ ದೊರೆಯ ಕಂಡೆನು! ಬಳಿಗೆ ನಡೆದೆನು. ಮುನ್ನವೇಕೆ ಬಾರಲಿಲ್ಲ ತನ್ನ ಬಳಿಗೆ ಎನ್ನದೆ ಎನ್ನನಪ್ಪಿದ! ರಾಜನೆನ್ನ ಮನೆಗೆ ಬರಲು ರಾಜನಿಲಯವಾದುದು ಎನ್ನ ಬಡಮನೆ! ರಾಜದೂತರೆಲ್ಲ ತಮ್ಮ ರಾಜಭಟರ ವೇಷವ ಬಿಸುಟು ಬಂದರು! ಅಹಹ! ನಾನು ರಾಜನೆಂದು ಬಹಳ ಬರಿದೆ ಬೆದರಿದೆ ಅವನನರಿಯದೆ! ರಾಜಭಟರ ದರ್ಪ ಹೊರಗೆ: ರಾಜನೊಲುಮೆಯಾಗಲು ದರ್ಪ ಹೀನರು! ೧೮-೭-೧೯೨೬

## ತಾಯಿಯ ಸಾನ್ನಿಧ್ಯ

ಹಗಲಿರುಳು ನೀನೆನ್ನ ಹಿಂಬಾಲಿಸಿದೆ, ಜನನಿ,
ಅದನರಿಯದೇಕಾಂಗಿ ಎಂದು ತಿಳಿದೆ;
ನಿನ್ನ ನೂಪುರರವಂ ಕೇಳಿಬರಲೆನಗಂದು
ಅದು ಬರಿಯ ಮಾಯೆ ಎಂದರಿತೆ, ತಾಯೆ.

ಜಗದ ಗಡಿಬಿಡಿಯೊಳಾಂ ಸಿಲುಕಿರಲು ನಿನ್ನಡಿಯ
ಗೆಜ್ಜೆಗಳ ರವಮೆನಗೆ ಕೇಳಲಿಲ್ಲ;
ತುಂಬಿರಲು ಕೊಳ್ಳುವರ ಮಾರುವರ ಗಡಿಬಿಡಿಯು
ನಿನ್ನ ನೂಪುರ ರವವನರಿವೆನೆಂತು?

ಜಗದ ಸಂತೆಯನಗಲಿ ಗಡಿಬಿಡಿಯನಲ್ಲಿಟ್ಟು
ಅಡವಿಗಳ ಹೃದಯಮಂ ಸೇರಲೀಗ,
ಅಂದು ಕೇಳದ ರವಂ ಇಂದು ಕೇಳುವುದೆನಗೆ
ಅಂದು ಕಾಣದ ರೂಪು ಥಳಿಸುತಿಹುದು!

## ನಿನ್ನವನು ನಾನಲ್ಲವೆ?

ದೇಹವಿದು ನೀನಿರುವ ಗುಡಿಯೆಂದು ತಿಳಿದು
ಗುಡಿಸುವೆನು ದಿನದಿನವು, ದೇವದೇವ;
ಬುದ್ಧಿಯಿದು ಗುಡಿಯೊಳುರಿಯುವ ದೀಪವೆಂದು
ಅಮಲ ಚಿಂತೆಯ ತೈಲವನು ತುಂಬುವೆ.

ಎದೆಯ ಕಮಲಾಕರದಿ ನೀನು ಮೀಯುವೆ ಎಂದು
ಕಂಬನಿಯ ನವಜಲದಿ ದಿನವು ತೊಳೆವೆ;
ಇರುಳು ಕವಿಯದ ತೆರದಿ ರವಿಯ ಬೆಳಕನು ಕರೆವೆ,
ಮನದ ಬಾಗಿಲ ತೆರೆವೆ; ಮುಚ್ಚದಿರುವೆ.

ಎನ್ನ ಕರ್ಮದ ಹಣ್ಣುಗಳ ಕೊಯ್ದು ತರುವೆ,
ಸುಖದುಃಖಗಳನೆಲ್ಲ ಆಯ್ದು ತರುವೆ;
ಕಣ್ಣು ಕಿವಿ ಮೂಗು ಬಾಯಿಂದ್ರಿಯಂಗಳು ದುಡಿದ
ಹೂವುಗಳ ಮಾಲೆಯನು ನೆಯ್ದು ಬರುವೆ.

ಗಂಟೆಗಳ ನಾ ಹೊಡೆಯೆ, ಶಂಖವನು ನಾನೂದೆ,
ಮಂಗಳಾರತಿಯ ನಾ ಬೆಳಗಲರಿಯೆ;
ನಿನ್ನ ಸಂಗವ ತೊರೆಯೆ, ನಿನ್ನನೆಂದೂ ಮರೆಯೆ,
ನಿನ್ನವನು ನಾನಲ್ಲವೇನೊ, ದೊರೆಯೆ!

೧೦-೩-೧೯೨೮

## ಅಪಜಯದ ಸುಖ

ಅಪಜಯದ ಸುಖವನನುಭವಿಪುದನು ನಾನು
ವಿಪರೀತವಾಗರಿತೆ ನಿನ್ನೊಡನೆ ಆಡಿ.

ಸುಮವು ತರುರಾಜಿಗಳನಣಕಿಪುದ ಕಂಡಿಹೆನು,
ಹಿಮಮಣಿಯು ನವರತ್ನ ಭೂಷಣಗಳ;
ಹಿಮಕರನ ಮಿಂಚುಹುಳುವಲ್ಲಗಳೆವುದ ಕಂಡು
"ಅಮಮ ಅಪಜಯದ ಸುಖವಿರಲಿ!" ಎಂದೆ.

ಹನಿಯ ಮಹಿಮೆಯು ಸಾಗರವ ನುಂಗುವುದ ಕಂಡೆ,
ದಿನದ ಸಿರಿ ಯುಗಯುಗವ ಮೀರುವುದನು;
ಅನುದಿನವು ನಿನಗಾಗುವಪಜಯವ ಕಂಡು ನಾನ್
ಎನಗಾಗುವಪಜಯವ ಚುಂಬಿಸುವೆನು!

# ನಡೆ ಮುಂದೆ

ನಡೆ ಮುಂದೆ, ನಡೆ ಮುಂದೆ, ನಡೆ ಮುಂದೆ, ಮುಂದೆ!
ವೇದಾಂತ ಕೇಸರಿಯೆ, ನುಗ್ಗಿ ನಡೆ ಮುಂದೆ!
ಗರ್ಜಿಸುತ ನಡೆ ಮುಂದೆ,
ನಿರ್ಭಯದಿ ನಡೆ ಮುಂದೆ.
'ತತ್ತ್ವಮಸಿ' 'ಬ್ರಹ್ಮಾಸ್ಮಿ' 'ಶಿವ ನಾನು' ಎಂದು,
ವೀರಾತ್ಮ, ಧೀರಾತ್ಮ, ನಡೆ ನುಗ್ಗು ಮುಂದೆ!
ಹಿಂದಿರುಗಿ ನೋಡದಿರು, ಅಭಯಾತ್ಮ ನೀನು;
ಬೆದರದಿರು! ಬೆದರದಿರು! ಅಮೃತಾತ್ಮ ನೀನು!
ಆದ್ಯಂತವಿಲ್ಲದವ ನೀನು,
ಆನಂದಶೀಲನೈ ನೀನು!
ಹಂಗಿಸಿಯದೃಷ್ಟವಂ ನುಗ್ಗು ನಡೆ ಮುಂದೆ,
ಭಂಗಿಸುತ ಮೃತ್ಯುವಂ ನಡೆ ಮುಂದೆ, ಮುಂದೆ.
ಜಗದಿ ನಿನ್ನನು ತಡೆವ ಧೀರರಾರಿಲ್ಲ;
ನಿನ್ನ ನಾದಕೆ ಕಂಪಿಪುದು ಲೋಕವೆಲ್ಲ.
ಅದ್ವೈತವಿಲಯಾಗ್ನಿ ನಿನ್ನ
ಹೃದ್ವನವ ತುಂಬಿಹುದು ಮುನ್ನ!
ಅಶುಚಿಯೆಲ್ಲವ ದಹಿಸಿ ನುಗ್ಗಿ ನಡೆ ಬೇಗ,
ಪಾಪಪುಣ್ಯಗಳಿರಲಿ ನಡೆ ಮುಂದಕೀಗ.
ಪಾಪಿ ನಾನೆಂದಳಲು ಇದು ಕಾಲವಲ್ಲ!
ಎದ್ದೇಳು, ವಿಶ್ವಾತ್ಮ, ಹೇಡಿ ನೀನಲ್ಲ!
ಸೋಹಮೆನ್ನುತ ಏಳು! ಏಳು!
ಅಚಲಾತ್ಮ, ಎದ್ದೇಳು! ಏಳು!
ನಿದ್ದೆಯನು ಬಿಡು; ನುಗ್ಗು ನಡೆ ಮುಂದೆ, ಮುಂದೆ,
ಎದ್ದೇಳು! ಎದ್ದೇಳು! ಎದ್ದು ನಡೆ ಮುಂದೆ!
ವೇದಾಂತಕೇಸರಿಯೆ, ಗರ್ಜಿಸುತ ಹೋಗು;
ಘೋರ ವಿಪಿನಗಳೆಲ್ಲ ಕಂಪಿಸಲಿ, ಕೂಗು!
ಕಾಳನಿಶೆ ಕವಿದರೇನು?
ಕಾರ್ಮುಗಿಲು ಮುಸುಗಲೇನು?
ಮಿಂಚು ಥಳಿಸಲಿ, ಗರ್ಜಿಸಲಿ ಗುಡುಗು ಘೋರ;
ಧರೆಯ ತುಂಬಿದರೇನು ಕಾರ ಹಾಕಾರ?
ದಾರಿತೋರ್ಪುದು ನಿನ್ನ ನಯನಗಳ ಕಾಂತಿ;

ಹರುಷವೀವುದು ನಿನ್ನ ಹೃದಯದಾ ಶಾಂತಿ!
ಜನನ ಮರಣಾತೀತ ನೀನು;
ಹರ್ಷ ದುಃಖಾತೀತ ನೀನು;
ಅಳಿವಿಲ್ಲ; ಉಳಿವಿಲ್ಲ; ಬಾಳು ಬೇರಿಲ್ಲ;
ಉಂಟು ಇಲ್ಲೆಂಬುವಾ ಹಾಳು ಗೋಳಿಲ್ಲ!
ಧೀರಾತ್ಮ, ವೀರಾತ್ಮ, ನುಗ್ಗು ನಡೆ ಮುಂದೆ!
ಅಚಲಾತ್ಮ, ಅಮೃತಾತ್ಮ, ನಡೆ ಮುಂದೆ, ಮುಂದೆ!
ಗರ್ಜಿಸುತ ನಡೆ ಮುಂದೆ;
ನಿರ್ಭಯದಿ ನಡೆ ಮುಂದೆ!
ಎದ್ದೇಳು! ಎದ್ದೇಳು! ಏಳು! ನಡೆ ಮುಂದೆ!
ವೇದಾಂತಕೇಸರಿಯೆ, ನಡೆ ನುಗ್ಗು ಮುಂದೆ!

೧೨-೧೦-೧೯೨೮

## ಸೊಬಗನಾಸ್ವಾದಿಸಲು ಸಮಯವೆಮಗಿಲ್ಲ

ಸೊಬಗನಾಸ್ವಾದಿಸಲು ಸಮಯವೆಮಗಿಲ್ಲ;
ನಭನೀಲವನು ನೋಡಿ ಬೆರಗಾಪರಲ್ಲ!

ದಿನದಿನವು ಇನನುದಯವಾಗುವಂ, ಪೋಗುವಂ;
ದಿನದಿನವು ಹಿಮಕರಂ ಮೂಡುವಂ, ಬಾಡುವಂ;
ದಿನದಿನವು ಮಾರುತಂ ಆಡುವಂ, ಓಡುವಂ;
ಮನಮಾತ್ರ ಕೊರಗುತಿದೆ ಜಡವಾಗಿ, ಬಡವಾಗಿ!

ಉದಯದಲಿ ಕುಸುಮ ತಾನರಳುವುದು, ತೆರಳುವುದು;
ಮುದದಿಂದ ಬರುವುದಾ ಮಧುಮಾಸ, ವಿಧಿಹಾಸ;
ಪದುಳದಿಂ ಪಕ್ಷಿಗಳು ಪಾಡುವುವು, ಬೇಡುವುವು;
ಎದೆಯ ಸಂತಸ ಮಾತ್ರ ಕೊರಗುತಿದೆ, ಸೊರಗುತಿದೆ!

ದಿನದಿನವು ನೋಡುವೆವು ಸೃಷ್ಟಿ ವೈಚಿತ್ರ್ಯಮಂ;
ದಿನದಿನವು ಮಾತಾಡುವೆವು ಪ್ರಕೃತಿ ಸೌಂದರ್ಯಮಂ;
ಮನಮಾತ್ರ ಕೊರಗುತಿದೆ ಜಡವಾಗಿ, ಬಡವಾಗಿ;
ಹೇ ವಿಶ್ವಜನನಿ, ಒಲಿದೆಮ್ಮ ಸಲಹಮ್ಮ!

## ಎನ್ನನತಿ ಕಿರಿದು ಮಾಡಲು, ದೇವ, ನೀನು

ಎನ್ನನತಿ ಕಿರಿದು ಮಾಡಲು, ದೇವ, ನೀನು
ಉನ್ನತಾಕಾಶವನು ಸೃಷ್ಟಿಸಿರುವೆ.
ಎನ್ನಹಂಕಾರವನು ಹಂಗಿಸಲು ನೀನು
ನಿನ್ನಹಂಕಾರವನು ತೋರುತಿರುವೆ.

ಅತಿಜಾಣನೆಂದು ನಾ ಗರ್ವಿಸದ ತೆರದಿ
ಮತಿಗೆ ಮೀರಿಹ ಕಾರ್ಯವೆಸಗುತಿರುವೆ;
ಹಿತಕಾರಿ ನಾನೆಂಬ ಹೆಮ್ಮೆಯನು ಮುರಿಯೆ
ಪತಿತಪಾವನನಾದೆ ಲೋಕವರಿಯೆ.

ಎನ್ನಹಂಕಾರವದು ತೊಲಗಿದಂತೆಲ್ಲ
ನಿನ್ನಹಂಕಾರವೂ ಜಾರುತಿಹುದು;
ಎನ್ನಹಂಕಾರ ಸಂಪೂರ್ಣಮಾಗಳಿಯೆ
ನಿನ್ನೊಳಾನಿಳಿವೆನೈ ನೀನೆಯಾಗಿ.

೭-೭-೧೯೨೬

## ಎಷ್ಟೆಂದು ನಗಲೋ ದೇವ

ಎಷ್ಟೆಂದು ನಗಲೋ, ದೇವ,
ನಿನ್ನೀ ಲೀಲೆಯ ನೋಡಿ!

‘ತಂದೇ’ ಎನ್ನುವನಿಂದು
‘ಮಗನೇ’ ಎಂಬನು ನಾಳೆ.
‘ತಾಯೇ’ ಎಂಬುವನಿಂದು
‘ಸತಿಯೇ’ ಎಂಬನು ನಾಳೆ.

ಹುಟ್ಟಿದನೆಂಬುವನಿಂದು
ಸತ್ತವನಾಗುವ ನಾಳೆ.
ಹಣಗಾರನೆಂಬುವನಿಂದು
ಋಣಗಾರನಾಗುವ ನಾಳೆ.

ನಾಟಕವಾಡುವೆನೆಂದು
ಆಟವನಾಡುವನಿಂದು;
ನಾಟಕವರ್ಧವೆ ಸಂದು
ಮೂಟೆಯ ಕಟ್ಟುವನೆಂದೂ!

ಆಸೆಗಳರಳುವ ಮುನ್ನ
ಯಮ ಮಾರಾಯನು ತನ್ನ
ಜವಗಂಟೆಯ 'ಝೀ' ಎಂದು
ಎಳೆವನು "ಬಾ! ಬಾ!" ಎಂದು!

## ವೇದಾಂತ ಕೇಸರಿ

ವೇದಾಂತ ಕೇಸರಿಯಾಗೋ, ಮಾನವ,
ಲೋಕಾರಣ್ಯದೊಳಲೆದಾಡೆ.
ನಿರ್ಭಯನಾಗೋ, ಗರ್ಜಿಸುತಲೆಯೋ,
ಕಂಪಿಸಲಿಹಪರ ಗರ್ಜನೆಗೆ.

ವ್ಯಾಘ್ರಗಳಡಗಲಿ, ದಂತಿಗಳೋಡಲಿ,
ಮೈಮರೆಯಲಿ ಹರಿಣಾದಿಗಳು;
ಪಾಪಮೂಷಿಕವರಚುತಲಲೆಯಲಿ,
ಪುಣ್ಯಕೋಗಿಲೆ ಕೂಗಲಿ!

'ಸೋಹಂ! ಸೋಹಂ!' ಗರ್ಜನೆಯಿಂದ
ಜಗದಾರಣ್ಯವ ತಲ್ಲಣಿಸೊ!
'ಬ್ರಹ್ಮಾಸ್ಮಿ' ಎಂಬುದು ಮರುದನಿಗೈಯಲಿ
ಅಂಬರಕೇರಲಿ 'ತತ್ತ್ವಮಸಿ!'

## ಭೇರಿ

ನಿನ್ನ ಕಾಣುವ ಮುನ್ನ
ಕೊಳಲೂದುತಿದ್ದೆ;
ನೀನು ಸುಂದರಳೆಂದು
ಭಾವಿಸಿದ್ದೆ.

ನಿನ್ನ ನೋಡಲು ಕಾಳಿ
ಎಲೆ ತಾಯೆ, ಮಾರಿ,
ಕನಸೊಡೆದು ಸುರಿದುದೌ
ಗಾನವಾರಿ.

ಕಾಳ ಜನನಿಯ ನೋಡಿ
ಕೈಯಿಂದ ಜಾರಿ
ಸಿಡಿದೊಡೆದ ಕೊಳಲಾಯ್ತು
ರಣದ ಭೇರಿ.

ಗೆಲುವಿನುಲಿಯಳಿದುದೌ
ಬಲುಮೆಯುಲಿಯಾಗಿ;
ಮೊಳಗಿದುದು ಕೊಳಲು ರಣ
ಭೇರಿಯಾಗಿ.

ಕೊಳಲ ಕೇಳಿದ ಜನರು
ಭೇರಿಯನು ಕೇಳಿ
ಬೆರಗಾಗಿ ನಿಂತರೌ
ಮರುಕ ತಾಳಿ.

ಕಾಳಿ ಕುಣಿವರೆ ಬೇಕು,
ಕೊಳಲಲ್ಲಿ, ಭೇರಿ!
ನಿನ್ನ ನರ್ತನವೆಲ್ಲಿ?
ಕೊಳಲದೆಲ್ಲಿ?

೧೪-೭-೧೯೨೭

## ಎನಗಾಗಿ ಎನ್ನ ಆನಂದ

ಎನಗಾಗಿ ಬೀಸುತಿಹುದಿನಿದು ತಂಗಾಳಿ
ಎನಗಾಗಿ ಮೊರೆಯುವುದು ಚದುರ ಭೃಂಗಾಳಿ
ಎನಗಾಗಿ ಶೋಭಿಪುದು ಹಸುರು ಶೃಂಗಾಳಿ
ಎನಗಾಗಿ ನಾ ರಚಿಪುದಿದು ಎನ್ನ ಕೇಳಿ!

ಎನಗಾಗಿ ಥಳಿಪರು ಸುಧಾಕರ ದಿನೇಶ
ಎನಗಾಗಿ ಪಸರಿಸಿದೆ ನೀಲಿಯಾಕಾಶ,
ಎನಗಾಗಿ ಇಹ ಜಗವು ಎನ್ನ ವಿಶ್ವಾಸ
ಎನಗಾಗಿ ನಾ ರಚಿಪುದೆನ್ನ ಸಂತೋಷ.

ಮಳೆಯಾಗಿ ಸುರಿಯುವುದು ಎನ್ನ ಆನಂದ
ಬೆಳೆಯಾಗಿ ಮೆರೆಯುವುದು ಎನ್ನ ಆನಂದ
ಹೊಳೆಯಾಗಿ ಹರಿಯುವುದು ಎನ್ನ ಆನಂದ
ಒಲುಮೆಯಿಂದಾಂ ರಚಿಪುದೆನ್ನ ಆನಂದ.

ರಮಣೀಯವಾದ ಹೂವೆನ್ನ ಆನಂದ
ಕಮನೀಯವಾದ ತಳಿರೆನ್ನ ಆನಂದ
ಕಮಲದಂತೆಸೆವುದೆನ್ನತುಳ ಆನಂದ
ಕಮಲಜಾಂಡವು ಎನ್ನ ಮಹಿಮೆಯಾನಂದ.

ಜಲವಾಗಿ ಹರಿಯುವುದು ಎನ್ನ ಆನಂದ
ಅಲರಾಗಿ ನಲಿಯುವುದು ಎನ್ನ ಆನಂದ
ಎಲರಾಗಿ ಸುಳಿಯುವುದು ಎನ್ನ ಆನಂದ
ಪ್ರಳಯ ಭೈರವನುರಿಯು ಎನ್ನ ಆನಂದ.

ವಿಶ್ವಮಂ ವ್ಯಾಪಿಸಿಹ ಆತ್ಮವಾನಂದ
ವಿಶ್ವಸೃಷ್ಟಿಯ ಮೂಲಕಾರಣಾನಂದ
ವಿಶ್ವದಳಿವುಳಿವು ತಳಹದಿಯು ಆನಂದ
ವಿಶ್ವಾತ್ಮನಾದೆನ್ನ ಆತ್ಮವಾನಂದ.

ಎನಗಾಗಿ ಸ್ಥಿತಿಲಯಗಳೆನಗಾಗಿ ಸೃಷ್ಟಿ
ಎನಗಾಗಿ ಸುಖದುಃಖಮಾ ಬ್ರಹ್ಮದೃಷ್ಟಿ
ಎನಗಾಗಿ ನಾಂ ರಚಿಪ ಬ್ರಹ್ಮವಾನಂದ
ಎನಗಾಗಿ, ಎನಗಾಗಿ ಎನ್ನ ಆನಂದ!

## ಚಂದುಮಾಮಗೆ

ಚಂದಿರ ಬಾರೋ, ತೇಜೋ
ಮಂದಿರ ನೀ ಬಾರೋ.

ಮೂಡಣ ಗಗನವ ಶೋಭಿಸುತ
ಮೋಡಗಳೆಡೆಯೊಳು ರಂಜಿಸುತ
ಗಿರಿಗಳ ಬೆಳಗುತ
ತೊರೆಗಳ ತೊಳಗುತ
ನಾಡಿಗೆ ದೇಸಿಯ ನೆರೆಕೊಡುತ!

ಪರವಿಹವೆರಡನು ಸಂಧಿಸುತ
ಪರಮಾನಂದವ ಬಂಧಿಸುತ
ಕಾಂತಿಯ ಬೀರುತ
ಶಾಂತಿಯ ತೋರುತ
ತರಣಿಯ ಮನದೊಳು ವಂದಿಸುತ!

ಮಾಯಾ ಮೋಹವ ಮೋಹಿಸುತ
ಸಾಂತವ ನಾಂತದಿ ನೇಯಿಸುತ
ಕಮಲವನಳಿಸುತ
ಕುಮುದವನೊಲಿಸುತ
ಮಿಥ್ಯೆಗೆ ನಿತ್ಯತೆಯೀಯುತ್ತ!

## ಹುಣ್ಣಿಮೆ

ಹುಣ್ಣಿಮೆಯಿಂಪನು ನೀಡುತಿರೆ
ಕಣ್ಣಿಗೆ ಹಬ್ಬವ ಮಾಡುತಿರೆ
ಗಾಡಿಯ ಬಿಂಕದಿ ಮೆರೆಯೆ ತಿರೆ
ಬಾಳನು ಬೈಯುತ ಜರೆಯುವರೆ?

ಬೆಟ್ಟದ ನೆತ್ತಿಯೊಳೊಬ್ಬನೆ ನಿಂತೆನು ದಿಟ್ಟಿಸಿ ದೆಸೆಗಳ ನೋಡುತ್ತ;
ರೆಕ್ಕೆಯ ರಸಿಕರು ಹಾರಿದರಿಕ್ಕೆಗೆ ಸಂಜೆಯ ಹಾಡನು ಹಾಡುತ್ತ.
ಪಡುವಣ ದೆಸೆಯೊಳು ಕೆಂಪನು ಚೆಲ್ಲುತ ಬೈಗಿನ ನೇಸರು ತೊಳಗಿದನು;
ತೊಳಗುತ ಬೆಳಗುತಲುರುಳುತಲಿಳಿಯುತ ನಾ ನೋಡುತಲಿರೆ ಮುಳುಗಿದನು!

ತಳಿರೊಳು ಕುಳಿರೆಲರಾಡಿದುದು
ಬೈಗಿರುಳೆಲ್ಲಿಯು ತೀಡಿದುದು

ನೆಲವನು ಬಾಂದಳ ತಬ್ಬಿದುದು
ಮೌನತೆಯೆಲ್ಲಿಯು ಹಬ್ಬಿದುದು!

ನಭದೊಳು ಮೆಲ್ಲನೆ ಮಿಣುಕುತಲಿಣುಕುತ ಚುಕ್ಕಿಗಳೊಮ್ಮೆಯೆ ಮೂಡಿದುವು;
ಕನಸುಗಳಂದದಿ ಮೋಡಗಳೊಯ್ಯನೆ ತಣ್ಣೆಲರೊಳು ತೇಲಾಡಿದುವು!
ಮೂಡಣ ದೆಸೆಯೊಳು ನಸುಗೆಂಪೆಸೆಯಲು ಕತ್ತಲೆ ಹಿಮ್ಮೆಟ್ಟೋಡಿದುದು;
ಜೊನ್ನಿನ ಬಣ್ಣದಿ ತುಂಬಿದ ಬಿಂಬದ ಹೊನ್ನಿನ ಸೊನ್ನೆಯು ಮೂಡಿದುದು!

ಜನ್ನದ ಬೆಂಕಿಯ ಕೊಂಡದೊಳೇಳುವ ಶಾಂತಿಯ ದೇವತೆಯಂದದಲಿ,
ಕಬ್ಬಿಗನೆದೆಯೊಳು ಗಬ್ಬವನಾಂತಿಹ ಕಬ್ಬವು ಹೊರಗೊಗೆವಂದದಲಿ,
ನೀಲಾಂಬರದೊಳು ಮೆಲುಮೆಲನೇರುತ ತಿಂಗಳು ಮೂಡಿತು ಚಂದದಲಿ,
ಜೊನ್ನದ ಕಡಲೊಳು ಮುಳುಗುತ ಮೀಯುತ ನಲಿದುದು ತಿರೆ ಆನಂದದಲಿ!

ಗಿರಿಗಳು ಹೊಲಗಳು ಕಾಡುಗಳು
ತೊರೆಗಳು ನೀರಿನ ಬೀಡುಗಳು
ಮುದ್ದಿಡುವಿಂದುವಲಂಪಿನಲಿ
ಮೆರೆದುವು ನಲಿದುವು ಪೆಂಪಿನಲಿ!

ತಳಿರನು ಚುಂಬಿಸಿ, ಕೊಳದೊಳು ಬಿಂಬಿಸಿ, ಚೆಲುವಿನ ಚಂದ್ರಿಕೆ ಚೆನ್ನಾಯ್ತು!
ಬಾನೊಳು, ತಿರೆಯೊಳು, ಕುಣಿಯುವ ತೆರೆಯೊಳು ತಿಳಿ ಬೆಳುದಿಂಗಳು ಹೊನ್ನಾಯ್ತು!
ಮನದೊಳು ಬೆಳಗಿತು, ಎದೆಯೊಳು ತುಳುಕಿತು, ಜೊನ್ನಿನ ಬಿತ್ತರದಂಬುಧಿಯು!
ಸೊಬಗಿದು, ಸೊಗವಿದು, ಮಾಯೆಯ ಬೆಡಗಿದು? ಚಾಗಕೆ ಮಾಡಿದನೇಂ ಬಿದಿಯು?

ಬಾನೊಳು ತಿಂಗಳು ಬೆಳಗುತಿರೆ
ಮೀನುಗಳಿಣುಕುತ ತೊಳಗುತಿರೆ
ಶಾಂತಿಯ ಸೊಗದಲಿ ತುಂಬೆ ತಿರೆ
ಬಾಳಿದು ಹುಸಿಯೆಂದೆಂಬುವರೆ?

೯-೧೦-೧೯೨೮

## ಹಾದಿಗಾರನೆ

ತಮವೇರುತಿದೆ, ಇರುಳಾಗುತಿದೆ,
ಹಿಮ ಬೀಳುತಿದೆ, ಹಾದಿಗಾರನೆ,
ಎಲ್ಲಿಗೆ ಹೋಗುವೆ, ಎಲ್ಲಿಗೆ ಹೋಗುವೆ ನೀ?

ಕಾಣದ ಹೂಗಳ ಕೊಯ್ಯಲು ಹೋಗುವೆ
ನೋಡದ ನೋಟವ ನೋಡಲು ಹೋಗುವೆ
ಮಾಡದ ಮಾಟವ ಮಾಡಲು ಹೋಗುವೆ
ದಾಂಟದ ನದಿಯನು ದಾಂಟಲು ಹೋಗುವೆ
ಹಾರದ ಕಮರಿಯ ಹಾರಲು ಹೋಗುವೆ
ಏರದ ಗಿರಿಯನು ಏರಲು ಹೋಗುವೆ
ಪರಬೊಮ್ಮನ ನೋಡಲು ಹೋಗುವೆ ನಾ!

ಹೊತ್ತು ಹೋಯಿತು, ಸುತ್ತಮುತ್ತಲು
ಕತ್ತಲಾಯಿತು, ಹಾದಿಗಾರನೆ,
ಎತ್ತ ಹೋಗುವೆ, ಎತ್ತ ಹೋಗುವೆ ನೀ?

ಹೋಗುವೆ ಕತ್ತಲೆ ಆಗದ ಊರಿಗೆ
ಹೋಗುವೆ ಹೊತ್ತೇ ಹೋಗದ ಊರಿಗೆ
ಹೋಗುವೆ ಹಗಲೇ ಇಲ್ಲದ ಊರಿಗೆ
ಹೋಗುವೆ ಇರುಳೇ ಬಾರದ ಊರಿಗೆ
ಹೋಗುವೆ ಮನಸೇ ಗ್ರಹಿಸದ ಊರಿಗೆ
ಹೋಗುವೆನಿಂದ್ರಿಯ ಕಾಣದ ಊರಿಗೆ
ಹೋಗುವೆ ಪರಬೊಮ್ಮನ ಊರಿಗೆ ನಾ!

## ಅನಿರ್ವಚನೀಯ

ಓ ಮನವೆ, ಬಾ, ಮುಳುಗು ಭಕ್ತಿಜಲನಿಧಿಯಲ್ಲಿ!
ಸಾಕಿನ್ನು ಹೆಮ್ಮೆಯೇಕೆ?
ಈ ಮಹಾ ವಿಶ್ವದ ರಹಸ್ಯವನು ನೀನರಿಯೆ,
ಬರಿಯ ಹೋರಾಟ ಸಾಕೆ?
ಕಲ್ಪನೆಯೆರಂಕೆಗಳು ಬಳಲಿದುವು ದುಡುಕಿ
ಕಾಲದೇಶಗಳೆಲ್ಲೆಯನು ಹುಡುಕಿ ಹುಡುಕಿ!

ಹೋದಷ್ಟು ಕಾಣುವುದು; ಕಂಡಷ್ಟು ತೋರುವುದು;
ತೋರಿಕೆಗೆ ಕೊನೆಯದೆಲ್ಲಿ?
ಹಾದು ದಡ ಸೇರುವೆವೆ? ಏರಿದಂತೇರುವುದು!
ಮಾಯೆಯಿದು ಮುಗಿವುದೆಲ್ಲಿ?

ಮಾತುಗಳು ಸೋತು ಹಿಂಜರಿಯುವುವು ಹೆದರಿ,
ಚಿಂತೆಗಳನಂತದಲಿ ಕನಸಿನಂತುದುರಿ!

೫-೧೨-೧೯೨೮

## ಅಚಿಂತ್ಯ

ಇರುಳ ಕರುಳನು ಹೊಕ್ಕು ನೋಡಿದೊಡೆ ನೀನಲ್ಲಿ
ಬಿಳಿದಾಗಿ ತೋರುತಿರುವೆ!
ಹಗಲಿನೆದೆಯನು ಬಗೆಯುತಿಣಿಕಿದೊಡೆ ನೀನಲ್ಲಿ
ಕರಿದಾಗಿ ತೋರುತಿರುವೆ!

ಕಗ್ಗಲ್ಲಿನೆದೆಯಲ್ಲಿ ನುಗ್ಗಿ ನೋಡಿದೊಡಲ್ಲಿ
ಹೂವಾಗಿ ತೋರುತಿರುವೆ!
ಹೂವುಗಳ ಹೃದಯದಲಿ ಹುಡುಕಿ ನೋಡಿದೊಡಲ್ಲಿ
ಕಲ್ಲಾಗಿ ತೋರುತಿರುವೆ!

ಭೂತಳದ ರೂಪಗಳ ಸಿಗಿಸಿಗಿದು ನೋಡಿದರೆ
ನಾಕಾರನಾಗಿ ನೀ ತೋರುತಿರುವೆ!
ನಾಕಾರ ತತ್ತ್ವವನು ಅನುಭವಿಸಿ ನೋಡಿದರೆ
ಸಾಕಾರನಾಗಿ ನೀ ತೋರುತಿರುವೆ!

“ಅದು ಅಲ್ಲ! ಇದು ಅಲ್ಲ!” ಎಂದೆಲ್ಲರೊರೆಯೆ,
“ಅದು ನಾನು! ಇದು ನಾನು” ಎಂದು ನೀ ಮೊರೆವೆ!

೧೦-೧-೧೯೨೯

## ಅವಸರವು ಬೇಡ

ಸಮಯವಿಹುದಿನ್ನೂ, ಅವಸರವು ಬೇಡ,
ತುದಿಯ ಕಾಣದ ಕಾಲ ಮುಂದಿರುವುದು.
ಗುರಿಯು ಇರೆ ದೂರ, ಕಠಿನವಿರೆ ದಾರಿ,
ಯುಗ ಯುಗಗಳುಳಿದಿಹವು ಭೀತಿಯೇಕೆ?

ಬಾಗಿಲುಗಳಿಲ್ಲ, ಪಾಗಾರವಿಲ್ಲ,
ನಮ್ಮೊಡೆಯನರಮನೆಗೆ ಪಹರೆಯಿಲ್ಲ!
ಎಂದಾದರೇನು? ಎಲ್ಲಾದರೇನು?
ಯಾರಾದರರಮನೆಗೆ ನುಗ್ಗಬಹುದು!

೧೯-೬-೧೯೨೭

## ಮಿಣುಕು ಹುಳುಗಳು

ಕಣ್ಣನು ತಿವಿಯುವ ಕಗ್ಗತ್ತಲು ಕವಿ
ದಿದ್ದಿತು; ಇದ್ದುವು
ವನಗಳು ಗಾಢ ಸುಷುಪ್ತಿಯಲಿ.
ಮೌನವು ಶಾಂತಿಯ ಮಡಿಲೊಳಗಿದ್ದಿತು;
ಭೇದವ ನೀಗಿ
ಅತೀತವಾಗಿ
ಕತ್ತಲೊಳೆಲ್ಲವು ಲಯವಾಗಿ
ಇಹಪರವೆರಡೂ ಒಂದಾಗಿ
ವಿಶ್ವವೆ ಗೂಢ ಸಮಾಧಿಯ ಸೇರಿ
ಇದ್ದಿತು ಧ್ಯಾನಾನಂದವ ತೋರಿ.

ಮೇರೆಯೆ ಇಲ್ಲದ ಕತ್ತಲ ಕಡಲೊಳು
ಮಿಣುಕಿ ಮಿಣುಕಿ
ಮಿಂಚಿನ ಹನಿಗಳ ಮಳೆಯಂತೆ
ಹೊನ್ನೆಯ ಹುಳುಗಳು, ಕಾಂತಿಯ ಕಿಡಿಗಳು
ಹೊಳೆದು, ಅಳಿದು,
ಅಳಿದು, ಹೊಳೆದು,
ಚಿಮ್ಮುತ ಎಲೆಯಿಂದೆಲೆಯೆಡೆಗೆ
ಚಿಮುಕಿಸಿ ಮೋಹವನಡಿಗಡಿಗೆ
ಕುಣಿಯುತ ಮಿಣುಕುತ ಮನಸನು ಸೆಳೆದು
ಮೆರೆದುವು ಬೆಳಕಿನ ಮಣಿಗಳು ಹೊಳೆದು.

ಮಸಿಮಯ ನಭದೊಳು ಚುಕ್ಕಿಗಳೆಸೆದುವು;
ಜೋತಿಯ ಸೇಸೆಗ
ಳವುಗಳನಣಕಿಸಿ ಮಿಣುಕಿದುವು;

ಕೊಳದೆದೆಯೊಳು ಮರುಬಿಂಬಿಸಿ ಮಿಣುಕುತ
ಇಮ್ಮಡಿಯಾಗಿ
ಅಗಣಿತವಾಗಿ
ಕುಸುಮಿತ ಮಿಂಚಿನ ಲತೆಯಿಂದ
ಉದುರುವ ಸುಮಗಳ ತೆರದಿಂದ
ಗಡಿಪಾರಾದುಡುಗಣ ದಳದಂತೆ
ಹೊಳೆದುದು ಹೊನ್ನೆಯ ಹುಳುಗಳ ಸಂತೆ.

ಎವೆಯನು ಮುಚ್ಚದೆ, ಚಲಿಸದೆ, ಸುಮ್ಮನೆ
ನೋಡಿದೆ; ನೋಡಿದೆ
ಮಹಿಮೆಯ ನೋಟವ ಮೈಮರೆತು:
ಕವಿತಾವೇಶಾನಂದದ ಲಹರಿಯು
ಚಿತ್ತದಿ ಮೊರೆದು
ಎದೆಯೊಳು ಹರಿದು
ಕರಗಿಸಿತೆನ್ನೀ ವ್ಯಕ್ತಿಯನು;
ದೊರಕಿಸಿತೆನಗಾ ಮುಕ್ತಿಯನು:
ಮೋಹದ ನೋಟದೊಳಾನೊಂದಾಗಿ
ಮಿಣುಮಿಣುಕಿದೆ ಮಿಂಚಿನ ಹುಳುವಾಗಿ!

೧೪-೭-೧೯೨೭

## ಕಬೀರ ದಾಸರಿಂದ

ಅಂತ್ಯದ ಕಾಣದ ಮೇರೆಯನರಿಯದ
ಊರೊಂದಿರುವುದು ಸೋದರನೆ.
ಅಲ್ಲಿಹನೊಬ್ಬನು ಹೆಸರೇ ಇಲ್ಲದ
ಯಾರೂ ಅರಿಯದ ಮಾಯಾವಿ.
ಹೇಳಿದ ಕೇಳಿದವೊಂದೂ ಅಲ್ಲ
ಊರಿಗೆ ಹೋದವನೊಬ್ಬನೆ ಬಲ್ಲ.

ಉದ್ದವು ಅಗಲವು ಕಾಣುವುದಿಲ್ಲ,
ದೇಹಾಕಾರಗಳಲ್ಲಿಲ್ಲ.
ಅದು ಹೀಗಿರುವುದು ಎಂಬುದ ನಾನು
ನಿನಗೆಂತುಸುರಲಿ ಸೋದರನೆ?

ಬಾಯಿಂದಾಡಲು ಆಗುವುದಿಲ್ಲ.
ಬರೆಯಲು ಓಲೆಯೊಳಾಗುವುದಿಲ್ಲ.

ಸಿಹಿಯನು ತಿಂದಾ ಮೂಕನವೊಲು ಇದೆ,
ಗಹನವು ಅದರ ವಿಚಾರ!
ಮಾಯಾಲೋಕವ ಬಣ್ಣಿಪುದೆಂತೈ?
ಎಂಬನು ಭಕ್ತ ಕಬೀರ.

೧೬-೬-೧೯೨೭

## ಬಿನ್ನಹ

ಇದೆ ಎನ್ನ ಬಿನ್ನಹ ನಿನಗೆನ್ನ ತಾಯೆ:
ದಯಪಾಲಿಸಮ್ಮಾ ಜಗದಂಬೆ ಮಾಯೆ!

ಬಿರುಗಾಳಿ ಮಳೆಯೊಳು ಬಗ್ಗಡವಾಗದೆ
ಮಾಗಿಯ ಚಳಿಯೊಳು ಘನಹಿಮವಾಗದೆ
ಬಾಳಿನ ಹೊನಲು ಬ್ರಹ್ಮಾಂಬುಧಿಗೆ
ನಿರಂತರವಾಗಿ ಹರಿಯಲಿ ಸದಾ.

ಗರ್ವಕೆ ಮಣಿಯದೆ, ದೀನರ ತುಳಿಯದೆ,
ಸಿರಿಯಧಿಕಾರಗಳಾಸೆಗೆ ಸಿಲುಕಿ
ಶಿವ ಸತ್ಯ ಸೌಂದರಗಳನೆಲ್ಲ ಹಳಿಯದೆ
ಜೀವವು ಹೂವಿನೊಳಿರಲಿ ಸದಾ.

ಧರ್ಮವ ಬಿಸುಟು, ಕರ್ಮಕೆ ಬೆದರಿ,
ಸಂಗಾತಿಗಳನು ಬಿಟ್ಟೋಡಿಹೋಗದೆ,
ಅವರೆಡರೆಲ್ಲವನಾನಂದದಿಂದ
ಹೊರುವಂಥ ಮನವೆನಗಿರಲಿ ಸದಾ.

ಬಾಳನು ಬೈಯದೆ, ಎದೆಗುಂದದಳದೆ,
ಭೂಮಿಯು ನಿನ್ನ ಮಡಿಲೆಂದು ತಿಳಿದು
ಖುತದಿಂದ ಬಾಳಿ ಮೃತ್ಯುವನಣಕಿಪ
ಶಾಂತಿಯ ಬಲವೆನಗಿರಲಿ ಸದಾ.

೨೭-೬-೧೯೨೭

## ಸೋಮನಾಥಪುರದ ದೇವಾಲಯ

ಬಾಗಿಲೊಳು ಕೈಮುಗಿದು ಒಳಗೆ ಬಾ, ಯಾತ್ರಿಕನೆ,
ಶಿಲೆಯಲ್ಲವೀ ಗುಡಿಯು ಕಲೆಯ ಬಲೆಯು!
ಕಂಬನಿಯ ಮಾಲೆಯನು ಎದೆಯ ಬಟ್ಟಲೊಳಿಟ್ಟು
ಧನ್ಯತೆಯ ಕುಸುಮಗಳನರ್ಪಿಸಿಲ್ಲಿ.
ಗಂಟೆಗಳ ದನಿಯಿಲ್ಲ, ಜಾಗಟೆಗಳಿಲ್ಲಿಲ್ಲ;
ಕರ್ಪೂರದಾರತಿಯ ಜೋತಿಯಿಲ್ಲ.
ಭಗವಂತನಾನಂದ ರೂಪುಗೊಂಡಿಹುದಿಲ್ಲಿ;
ರಸಿಕತೆಯ ಕಡಲುಕ್ಕಿ ಹರಿವುದಿಲ್ಲಿ!

ಸರಸದಿಂದುಲಿಯುತಿದೆ ಶಿಲೆಯು ರಾಮಾಯಣವನಿಲ್ಲಿ!
ಬಾದರಾಯಣನಂತೆ ಭಾರತವ ಹಾಡುತಿಹುದಿಲ್ಲಿ!
ಕುಶಲತೆಗೆ ಬೆರಗಾಗಿ ಮೂಕವಾಗಿದೆ ಕಾಲವಿಲ್ಲಿ!
ಮೂರ್ಛೆಯಲಿ ಮೈಮರೆತು ತೇಲುವುದು ಭೂಭಾರವಿಲ್ಲಿ!

೧೦-೭-೧೯೨೮

## ದೇವರು ಮತ್ತು ದೊರೆ

ದಿನವು ನಿನ್ನ ಕೂಡಿ ನಲಿವೆ,
ದೇವ, ಮಾತನಾಡಿ ನಲಿವೆ;
ನಲಿವೆ ನಿನ್ನ ವಸನವುಟ್ಟು,
ನಲಿವೆ ನಿನ್ನ ಬೆಡಗ ತೊಟ್ಟು;
ನಿನ್ನ ರೂಪ ಧರಿಸಿ ನಾನು,
ನೋಡಿ ಕುಣಿವೆ ನಲಿಯೆ ನೀನು;
ನಿನ್ನ ದನಿಯ ಸಿರಿಯನೊಲಿವೆ,
ಹೆಮ್ಮೆಯಿಂದ ಹಾಡಿ ನಲಿವೆ!
ಸುದ್ದಿಯೊಂದು ಹರಡಲಿಲ್ಲ;
ಯಾರು ಬಳಿಗೆ ಬಾರಲಿಲ್ಲ.
“ಧನ್ಯ ನೀನು” ಎನ್ನಲಿಲ್ಲ;
ನಿನ್ನನಂತೂ ಕೇಳ್ದರಿಲ್ಲ.

ಆದರೆನ್ನ ನೋಡಿ ಎಲ್ಲ
ಹುಚ್ಚನೆಂದರು.
ಬಂದ ಕೆಲರು ಹಾಸ್ಯಕಾಗಿ
ಬಳಿಗೆ ಬಂದರು.

ಇಂದು ನಾನು ಗಳಿಗೆಯೊಂದೆ
ದೊರೆಯ ಬಳಿಗೆ ಹೋಗಿ ಬಂದೆ.
ಅವನಿಗೇನು ಹಾಡಲಿಲ್ಲ;
ಸಲಿಗೆಯಿಂದ ನುಡಿಯಲಿಲ್ಲ.
ಅವನು ದೊರೆಯತನದೊಳಿದ್ದ;
ಪ್ರಜೆಯತನದೊಳಾನು ಇದ್ದೆ.
ಅವನ ಸಿರಿಯನೊಲಿಯಲಿಲ್ಲ,
ಕಂಡು ಹೆಮ್ಮೆಪಡಲು ಇಲ್ಲ.
ಸುದ್ದಿ ಹರಡಿತೂರೊಳೆಲ್ಲ;
ಎನ್ನ ಬಳಿಗೆ ಬಂದರೆಲ್ಲ.
'ಧನ್ಯ ನೀನು' ಎಂದರೆಲ್ಲ.
ರಾಜನನ್ನು ಕೇಳ್ದರೆಲ್ಲ.
ನಾನೆ ಹುಚ್ಚೊ? ಅವರೆ ಹುಚ್ಚೊ?
ಯಾರು ಬಲ್ಲರು!
ನೀನೆ ಹೆಚ್ಚೊ? ದೊರೆಯೆ ಹೆಚ್ಚೊ?
ಯಾರು ಬಲ್ಲರು?

೬-೮-೧೯೨೭

## ವಸಂತ ರಮಣಿಯರ ಹಾಡು

ಸೋದರಿಯರೆ ನೀವೆಲ್ಲರು ಬನ್ನಿ,
ಮೇದಿನಿಗೊಯ್ಯುವ ಮೋದವ ತನ್ನಿ;
ಮಧುಮಾಸದ ಮೋಡದ ಮೇಲೇರಿ,
ಮುದದಿಂ ಪ್ರೇಮವಿಲಾಸವ ಬೀರಿ;
ಮಧುರಾಜನ ಪಾಳೆಯವನು ಸೇರಿ,
ವಿಧವಿಧ ರಾಗದ ಹೂಗಳ ಹೇರಿ;
ಸೋದರಿಯರೆ ನೀವೆಲ್ಲರು ಬನ್ನಿ,
ಮೇದಿನಿಗೊಯ್ಯುವ ಮೋದವ ತನ್ನಿ!

ಕೋಕಿಲ ಕಂಠದ ಕೊಳಲನು ಸೇರಿ
ಲೋಕಗಳೊಡೆಯನ ಮಹಿಮೆಯ ಸಾರಿ;
ತಿಳಿಗೊಳದೊಳು ಜಲಲೀಲೆಯನಾಡಿ
ಬಳಲಿದ ಮನುಜರಿಗೊಲುಮೆಯ ನೀಡಿ;
ಗಳಗಳರವದಿಂ ತೊರೆಯಾಗೋಡಿ
ಬಳುಕಿ ನಲಿದು ಸುರಗಾನವ ಹಾಡಿ;
ಸೋದರಿಯರೆ ನೀವೆಲ್ಲರು ಬನ್ನಿ,
ಮೇದಿನಿಗೊಯ್ಯುವ ಮೋದವ ತನ್ನಿ!

ಪಲ್ಲವಿತ ವನದಿ ಮಲ್ಲಿಗೆಯಾಗಿ
ಉಲ್ಲಸವನು ತೋರಿರಿ ತಲೆದೂಗಿ;
ಚಂಪಕ ವನದೊಳು ಸಂಪಗೆಯಾಗಿ
ಕಂಪಿಂ ಮರಿಗೋಗಿಲೆಯನು ಕೂಗಿ;
ತರುಲತೆ ಹೂಗಳ ಹೃದಯವ ಸೇರಿ
ತಿರೆಕೌಯಲಿ ರತಿಯಿಹುದನು ಸಾರಿ;
ಸೋದರಿಯರೆ ನೀವೆಲ್ಲರು ಬನ್ನಿ,
ಮೇದಿನಿಗೊಯ್ಯುವ ಮೋದವ ತನ್ನಿ!
ಕೊಳದೊಳಗರಳುವ ಬಿಸಜಗಳಾಗಿ,
ಕೆಲರು ಮೊರೆವ ಮರಿದುಂಬಿಗಳಾಗಿ;

ಕೆಲರೊಲೆದಾಡುವ ಮೊಳೆವುಲ್ಲಾಗಿ,
ಕೆಲರಲ್ಲೋಡುವ ಹುಲ್ಲೆಗಳಾಗಿ;
ಕೆಲರಲ್ಲಾಡುವ ನವಿಲುಗಳಾಗಿ,
ಕೆಲರಲ್ಲಿಯ ಸುರ ರಮಣಿಯರಾಗಿ;
ಸೋದರಿಯರೆ ನೀವೆಲ್ಲರು ಬನ್ನಿ,
ಮೇದಿನಿಗೊಯ್ಯುವ ಮೋದವ ತನ್ನಿ!

ಕೆಲರಲ್ಲಲೆಯುವ ರಾಧೆಯರಾಗಿ,
ಕೆಲರಲ್ಲಿಯ ಮಧುಸೂದನರಾಗಿ;
ಕೆಲರೆಳೆವದನದ ಗೋಪಿಯರಾಗಿ,
ಕೆಲರಲ್ಲಿಯ ಗೋಪಾಲಕರಾಗಿ;
ಕೆಲರಾನಂದದ ನೆಲೆವೀಡಾಗಿ,
ಕೆಲರಾನಂದದ ನಿಜರೂಪಾಗಿ;

ಸೋದರಿಯರೆ ನೀವೆಲ್ಲರು ಬನ್ನಿ,
ಮೇದಿನಿಗೊಯ್ಯುವ ಮೋದವ ತನ್ನಿ!

## ನವಿಲು

ಯಾವ ದೇವಶಿಲ್ಪಿಯಿಂತು
ನಿನ್ನ ಕೊರೆದನು?
ಯಾವ ಬಣ್ಣಗಾರನಿಂತು
ರಂಗನೆರೆದನು?
ಒಲವಿನೊಡೆಯ ಸೊಬಗಿನೊಡೆಯ-
ನೊಡನೆ ಕೂಡಿ ಸಂಚುಮಾಡಿ
ನಿನ್ನ ಪಡೆದನೆ?
ಮಳೆಯಬಿಲ್ಲ ಕರಗಿಸಿಂತು
ನಿನ್ನ ಕಡೆದನೆ?

ಒಲುಮೆಗಿರುವ ಕಣ್ಣುಗಳನು
ಸುಲಿಗೆಮಾಡಿಹೆ.
ಅವುಗಳನ್ನು ಪುಕ್ಕದಲ್ಲಿ
ಕೆತ್ತಿ ಹೂಡಿಹೆ!
ಸಗ್ಗದಂಗನೆಯರ ಸಂಗ
ಮಾಡಿ ಸೆಜ್ಜೆಯಿಂದ ಗೆಜ್ಜೆ
ಗಳನು ಕದ್ದಿಹೆ.
ಅವರ ಹೆಜ್ಜೆಯಿಡುವ ಬಿಜ್ಜೆ-
ಗೋಜಳಿದ್ದಿಹೆ!

೧೦-೬-೧೯೨೭

## ಅಂತೆ

ಎಲ್ಲೆಲ್ಲಿಯು ನೀನಿಹೆಯಂತೆ
ಎಲ್ಲವು ನೀನಂತೆ.

ಎಲ್ಲದರಾದಿಯು ನೀನಂತೆ
ಎಲ್ಲದರಂತವು ನೀನಂತೆ

ಚಿಂತೆಗೆ ತಿಳಿಯದೆ
ಮಾತಿಗೆ ಸಿಲುಕದೆ
ಅಂತರಾತ್ಮನಾಗಿಹೆಯಂತೆ.

ವೇದಗಳರಿಯದ ವಿಭುವಂತೆ
ಯೋಗಿಗಳರಿಯದ ಪ್ರಭುವಂತೆ
ಭಕ್ತರ ಹೃದಯದಿ
ನೆಲೆಸುತ ಮುದದಿ
ಭಕ್ತವತ್ಸಲನಾಗಿಹೆಯಂತೆ.

ಮಾಯಾತೀತನು ನೀನಂತೆ
ಮಾಯಾರೂಪಿಯು ನೀನಂತೆ
ಪಾಪ ಪುಣ್ಯಗಳ
ಜನನ ಮರಣಗಳ
ಮೀರಿಹ ಪುರುಷನು ನೀನಂತೆ.

ಲೋಕವ ರಕ್ಷಿಸೆ ಬಹೆಯಂತೆ
ಶೋಕಿಪರಿಗೆ ನೀ ದಯೆಯಂತೆ
ರಾಮನು ನೀನಂತೆ
ಕೃಷ್ಣನು ನೀನಂತೆ
ಶ್ರೀ ನರಸಿಂಹನು ನೀನಂತೆ.

ಅದ್ವಿತೀಯನಾಗಿಹೆಯಂತೆ
ಹೃದ್ವನವಾಸಿಯು ನೀನಂತೆ
ಭಕ್ತಿಯು ನೀನಂತೆ
ಶಕ್ತಿಯು ನೀನಂತೆ
ಸಿದ್ಧರ ಮುಕ್ತಿಯು ನೀನಂತೆ.

ಅಂತೇ? ಅಂತೇ? ಯಾಕಂತೆ?
ತತ್ವವೆಂಬುದಂತೆಯ ಸಂತೆ!
ಅಂತೇ? ಕಂತೇ?
ಯಾಕೀ ಚಿಂತೆ?
ಕಟ್ಟಕಡೆಗೆ ನೀ ಬರಿಯಂತೆ!

೧೬-೭-೧೯೨೮

# ಗತಿ

ಶ್ರೀ ಮುಜುಂದಾರರಿಂದ ಚಿತ್ರಿತವಾದ- ಮಸಣದ ತಲೆಬುರುಡೆಯೊಂದನ್ನು ಕರತಲದಲ್ಲಿಟ್ಟುಕೊಂಡು ನೋಡುತ್ತಿರುವ ತರುಣಿಯ ಚಿತ್ರದಿಂದ ಪ್ರೇರಿತವಾದದ್ದು.

ಹಿಗ್ಗುವೆ ಏತಕೆ ಚೆಲುವಿನ ಹೆಣ್ಣೆ?
ಕಡೆಗೀ ರೂಪಿಗೆ ಗತಿ ಮಣ್ಣೆ!
ನಿನ್ನೀ ಅಂದಕೆ ಚಂದಕೆ ಎಲ್ಲಾ
ಮಸಣವೆ ಅಂತ್ಯದ ಗತಿ ಹೆಣ್ಣೆ:
ಇಂದೀ ವದನವು ಸೊಬಗಿನ ಬೀಡು;
ಮುಂದಿದು ಮಸಣದ ಬಿಳಿ ತಲೆಯೋಡು!

ಯುವಕರ ಸೆರೆಹಿಡಿದವರನು ಮೋಹಿಸಿ
ಮುಗುದರ ಮಾಡುವ ಕಣ್ಣುಗಳು
ಹೊಳಪನು ಕಳೆಯುತ ಜೀವವನುಳಿಯುತ
ಭೀಕರ ತೂತುಗಳಾಗುವುವು.
ಇಂದೀ ದೇಹವು ಚೆಲುವಿನ ಬೀಡು;
ಮುಂದಿದು ಮಸಣದ ಎಲುಬಿನ ಗೂಡು!

ಎಲ್ಲರು ಚುಂಬಿಸಲೆಳಸುವ ಕೆನ್ನೆಗ
ಳಸ್ಥಿಯ ಗೂಡುಗಳಾಗುವುವು;
ಎಳನಗೆ ಬೀರುವ ನಿನ್ನಾನನವಿದು
ಹಲ್ಲನು ಚಿಲಿವುದು ಮರುಳಂತೆ!
ಇಂದೀ ವದನವು ಮದನನ ಬೀಡು:
ಮುಂದಿದು ಮಸಣದ ಬಿಳಿ ತಲೆಯೋಡು!

ಚಿನ್ನದ ರನ್ನದ ಒಡವೆಗಳಿಡುವೀ
ಶಿರ ತಾ ಪುಡಿಯೊಳು ಹೊರಳುವುದು;
ಹಿಮಮಣಿಗಳ ಮಣಿ, ಹಸುರೇ ಹಾಸಿಗೆ,
ಕಡೆಗಿದೆ ಚೆಲುವಿಗೆ ಗತಿ, ಹೆಣ್ಣೆ!
ಇಂದೀ ದೇಹವು ಚೆಲುವಿನ ಬೀಡು;
ಮುಂದಿದು ಮಸಣದ ಎಲುಬಿನ ಗೂಡು!

## ಪ್ರಾರ್ಥನೆ

ನಿನ್ನ ಬಾಂದಳದಂತೆ
ನನ್ನ ಮನವಿರಲಿ;
ನಿನ್ನ ಸಾಗರದಂತೆ
ನನ್ನ ಎದೆಯಿರಲಿ.

ನಿನ್ನ ಸುಗ್ಗಿಯ ತೆರದಿ
ನನ್ನ ಸೊಬಗಿರಲಿ;
ನಿನ್ನ ಲೀಲೆಯ ತೆರದಿ
ನನ್ನ ಬಾಳಿರಲಿ.

ನಿನ್ನ ಬಲವಿರುವಂತೆ
ನನ್ನ ಬಲವಿರಲಿ;
ನಿನ್ನ ತಿಳಿವಿರುವಂತೆ
ನನ್ನ ತಿಳಿವಿರಲಿ.

ನಿನ್ನೊಲ್ಮೆಯಂದದಲಿ
ನನ್ನೊಲ್ಮೆಯಿರಲಿ;
ನಿನ್ನಾಳವೆನಗಿರಲಿ
ನೀನೆ ನನಗಿರಲಿ;

ನಿನ್ನಾತ್ಮದಾನಂದ
ನನ್ನದಾಗಿರಲಿ;
ನಿನ್ನೊಳಿರುವಾ ಶಾಂತಿ
ನನ್ನೆದೆಗೆ ಬರಲಿ.

೧೭-೮-೧೯೧೮

## ತೊರೆ

ಮಲೆಯ ಮೇದು ಹಣ್ಣ ತಿಂದು
ಮುದವು ಮೀರೆ ಚಿಮ್ಮಿನೆಗೆವ
ಎರಳೆ ಸರಸವಾಡುವೆಡೆಯೊಳ್
ಉದಿಸಿ ಬರುವೆನು!

ಅರಳ ಕೂಡಿ, ಮಾಲೆ ಮಾಡಿ
ಎರೆಯನರಸಿ ಕರೆಯುತಲೆವ
ತರಳೆಯಂತೆ ಮೋಹವೆರಚಿ
ಮೊರೆದು ಹರಿವೆನು!
ಎಲರಿನಲ್ಲಿ ತಲೆಯನೊಲೆವ
ತಳಿರಿಡಿದೆಳೆವಳ್ಳಿಯಂತೆ
ಬಳುಕಿಯತ್ತ ಬಾಗಿಯಿತ್ತ
ಉರುಳಿ ಮೊರೆವೆನು!
ದರಿಯ ಹಾರಿ ಅರೆಯ ಜಾರಿ
ಕರಿಯ ನೆರಳ ಹಳುವ ನುಸಿದು
ಗುರಿಯ ಮರೆತ ಕಳ್ಳನಂತೆ
ನುಸುಳುತಿರುವೆನು!
ಬನದ ಸೊಬಗ ನೋಡಿ, ಹಾಡಿ,
ವಿಹಗದುಲಿಯ ಕೇಳಿ, ತಾಳಿ
ಮುದವನೊಂಟಿಯಾಗಿ ಹರಿವ
ಕವಿಯೊಲಲೆವೆನು!
ಅರಿಯೆ ನಾನು ಸೇರುವೆಡೆಯ,
ಅರಿಯೆ ದಾರಿ ಯಾವುದೆಂದು.
ಮುಂದೆ ಮುಂದೆ ಬಿಡದೆ ಹರಿವೆ,
ಹರಿವ ಹರುಷಕೆ
ಬರುವ ಜನರು ಬರುತಲಿರಲಿ
ಮೊರೆವೆನೆಂದಿಗೂ!
ತೆರಳುವವರು ತೆರಳುತಿರಲಿ
ಹರಿವೆನೆಂದಿಗೂ!

೬-೬-೧೯೨೮

## ನನ್ನ ಬಯಕೆ

ಸದ್ದಿರದ ಪಸುರುಡೆಯ ಮಲೆನಾಡ ಬನಗಳಲಿ
ಮೊರೆವ ತೊರೆಯೆಡೆಯಲ್ಲಿ ಗುಡಿಸಲೊಂದಿರಲಿ.

ಅಲ್ಲಿ ಗಿಳಿ ಗೊರವಂಕ ಕೋಗಿಲೆಗಳಿಂಚರವು
ಕಲೆಯುತಲೆಯಲೆಯಾಗಿ ತೇಲಿ ಬರುತಿರಲಿ.

ಅಲ್ಲಿ ಬಳಿ ಪಸಲೆಯಲಿ ದನಗಳಂಬಾ ಎಂಬ
ದನಿಯು ದನ ಕಾಯುವನ ಕೊಳಲೊಡನೆ ಬರಲಿ.
ಅಲ್ಲಿ ಸಿರಿಗನ್ನಡದ ಕಬ್ಬಗಳ ಹಬ್ಬಗಳು
ದಿನ ದಿನವು ಸವಿಯೂಟವಿಕ್ಕುತಿರಲೆನಗೆ.

ಬಾಂದಳದಿ ಹಾರಿದರು ಬುವಿಯಲ್ಲಿ ಜಾರುತಿಹ
ರಸಿಕನಾಗಿಹನೊಬ್ಬ ಗೆಳೆಯನಿರಲೆನಗೆ.
ಬೈಗಾಗೆ ನಮ್ಮೊಡನೆ ಗಳಪಿಯಲೆದಡ್ಡಾಡೆ
ಗೋಪಾಲನಾಗಿರುವ ತಿಮ್ಮನೆನಗಿರಲಿ!

ಮೇಲೆ ಬಾಳನು ಬಿಟ್ಟು ನಾನಳಿದು ಮರೆಯಾಗೆ
ನನ್ನಾಸೆ ಏನೆಂದು ಎಲ್ಲರರಿತಿರಲಿ:
ಸಗ್ಗವಿವನೊಳಗೊಂಡಿರಲು ಸಗ್ಗವೆನಗಿರಲಿ;
ನರಕವಿವನೊಳಗೊಂಡಿರಲು ನರಕವಿರಲಿ!

೧೧-೬-೧೯೧೮

## ಕಾಣದ ಕಡಲಿಗೆ

ನಿನ್ನ ನೋಡಲೆನ್ನ ಎದೆಯು
ಕಾತರಿಸುವುದು.
ಎನ್ನ ಎದೆಯೊಳಾಗ ಆಗ
ನಿನ್ನ ಮೊರೆವ ದನಿಯ ತಂದು,
ಮಹಾ ಕಡಲೆ, ನಿನ್ನ ನೆಳಲು
ಬಂದು ಸುಳಿವುದು.
ಎನ್ನ ಜೀವ ಉಬ್ಬಿಯುಬ್ಬಿ
ತಳಮಳಿಸುವುದು!

ನಿನ್ನ ತೆರದಿ ಒಡಲೊಳೊಂದು
ಕಡಲು ನಲಿವುದು.
ನಿನ್ನ ತೆರೆಗಳಾಟದಂತೆ
ಎನ್ನ ಭಾವದಲೆಗಳೆದ್ದು

ಹೃದಯ ಮನಗಳಲ್ಲಿ ಕುಣಿದು
ಹರುಷವೀವುವು!
ಎದೆಯು ನಿನ್ನ ಮೇರೆ ಮೀರಿ
ಹಿಗ್ಗಿ ನಲಿವುದು!

ಬಹಳ ವೇಳೆ ಮನದಿ ನಿನ್ನ
ಚಿತ್ರಿಸಿರುವೆನು:
ನಿನ್ನ ದೂರವಿರದ ದೂರ,
ಎಲ್ಲೆ ಇಲ್ಲದಿರುವ ತೀರ,
ತೆರೆಯು ನೊರೆಯು ಮೊರೆಯನೆಲ್ಲ
ಕಲ್ಪಿಸಿರುವೆನು!
ಆದರೇನು? ಎನ್ನ ಎದೆಯು
ತಣಿಯಲೊಲ್ಲದು!

ನಿನ್ನನಪ್ಪಿ ನೋಡುವಾಸೆ
ಮನವ ಕೊರೆವುದು.
ಒಲಿದ ರಮಣಿ ದೂರವಿರಲು
ಅವಳ ಚಿತ್ರಿಪಟವ ಕಂಡು
ಅವಳ ದನಿಯ ನೆನಸಿಕೊಂಡು
ಎದೆಯು ತಣಿವುದೆ?
ಅವಳ ನೆನಪು ತರುವ ಕುರುಹು
ಮನವ ಕೆಣಕದೆ?

ದೇವನೊಲಿದ ಎದೆಗೆ ಸಾಕೆ
ಬರಿಯ ಬಣ್ಣನೆ?
ವೇದವೇನು ಹೇಳಲೇನು?
ಉಪನಿಷತ್ತು ಹಾಡಲೇನು?
ಯೋಗಿಸಿದ್ಧರೊರೆಯಲೇನು
ಆಸೆ ಮಣಿವುದೆ?
ಅವನ ಕಂಡು ಒಲವನುಂಡ
ಹೊರತು ತಣಿವುದೆ?

ಕವಿಗಳೆಲ್ಲ ಬಣ್ಣಿಸಿಹುದ
ನೋಡುತಿರುವೆನು.
ಕಪ್ಪೆ, ಮೀನು, ಮೊಸಳೆ, ರತ್ನ,

ಹರಿಗೆ ಶಿವಗೆ ಹೋಲಿಪಂತೆ
ಶ್ಲೇಷೆಯಿಂದ ಬರೆವ ಯತ್ನ;
ಬೇರೆ ಕಾಣೆನು.
ನಿನ್ನ ಹೊಟ್ಟೆಯೊಂದನಲ್ಲ
ದೆದೆಯ ಕಾಣರು!

ಕಂಡ ಕೆಲರು ನುಡಿದರೆನಗೆ
ನಿನ್ನ ಸಿರಿಯನು.
ಅವರ ಕಣ್ಣುಗಳಲಿ ನಿನ್ನ
ಅಲೆಯ ಮಿಂಚ ನೋಡಲಿಲ್ಲ;
ಅವರ ಕೊರಳಿನಲ್ಲಿ ನಿನ್ನ
ಘೋಷವಿಲ್ಲವು;
ಅವರ ಎದೆಯ ಭಾವಗಳಲಿ
ನಿನ್ನ ಕಾಣೆನು!

ನಿನ್ನ ನೋಡದಿಂತು ಬಯಸಿ
ಹಾಡುತಿರುವೆನು.
ದೂರದೇಶದಲ್ಲಿ ಇರುವ
ಹಿರಿಯ ಕವಿಯ ಕತೆಯ ಕೇಳಿ,
ಅವನ ಕವಿತೆಯೋದಿ, ಅವನ
ನೋಡೆ ಬಯಸುವ
ಕಿರಿಯ ಕವಿಯ ತೆರದಿ ನಿನ್ನ
ಕೂಡಲೆಳಸುವೆ!

ಕಡಲೆ, ನಿನ್ನ ಮೈಮೆ ಎನ್ನ
ಬಾಳಿಗಾಗಲಿ!
ನಿನ್ನ ಬಿತ್ತರೆನಗೆ ಬರಲಿ!
ನಿನ್ನ ಚಿತ್ತವೆನ್ನೊಳಿರಲಿ!
ಕಾಣದಿರದ ಕಡಲಿಗಿಂತು
ಹಾಡುತಿರುವೆನು!
ಕಂಡ ಕಡಲಿಗೆಂತುಟುಲಿವೆ
ಎಂಬುದರಿಯೆನು!

೨೫-೧೧-೧೯೨೭

# ನೇಗಿಲಯೋಗಿ

ನೇಗಿಲ ಹಿಡಿದಾ ಹೊಲದೊಳು ಹಾಡುತ
ಉಳುವಾ ಯೋಗಿಯ ನೋಡಲ್ಲಿ.
ಫಲವನು ಬಯಸದ ಸೇವೆಯೆ ಪೂಜೆಯು
ಕರ್ಮವೆ ಇಹಪರ ಸಾಧನವು.
ಕಷ್ಟದೊಳನ್ನವ ದುಡಿವನೆ ತ್ಯಾಗಿ
ಸೃಷ್ಟಿನಿಯಮದೊಳಗವನೇ ಭೋಗಿ.

ಲೋಕದೊಳೇನೇ ನಡೆಯುತಲಿರಲಿ
ತನ್ನೀ ಕಾರ್ಯವ ಬಿಡನೆಂದೂ:
ರಾಜ್ಯಗಳುದಿಸಲಿ ರಾಜ್ಯಗಳಳಿಯಲಿ,
ಹಾರಲಿ ಗದ್ದುಗೆ ಮಕುಟಗಳು,
ಮುತ್ತಿಗೆ ಹಾಕಲಿ ಸೈನಿಕರೆಲ್ಲ,
ಬಿತ್ತುಳುವುದನವ ಬಿಡುವುದೆ ಇಲ್ಲ.

ಬಾಳಿತು ನಮ್ಮೀ ನಾಗರಿಕತೆ ಸಿರಿ
ಮಣ್ಣಿಣಿ ನೇಗಿಲಿನಾಶ್ರಯದಿ;
ನೇಗಿಲ ಹಿಡಿದಾ ಕೈಯಾಧಾರದಿ
ದೊರೆಗಳು ದರ್ಪದೊಳಾಳಿದರು.
ನೇಗಿಲ ಬಲದೊಳು ವೀರರು ಮೆರೆದರು,
ಶಿಲ್ಪಿಗಳೆಸೆದರು, ಕವಿಗಳು ಬರೆದರು.

ಯಾರೂ ಅರಿಯದ ನೇಗಿಲ ಯೋಗಿಯೆ
ಲೋಕಕೆ ಅನ್ನವನೀಯುವನು.
ಹೆಸರನು ಬಯಸದೆ ಅತಿಸುಖಕೆಳಸದೆ
ದುಡಿವನು ಗೌರವಕಾಶಿಸದೆ.
ನೇಗಿಲಕುಳದೊಳಗಡಗಿದೆ ಕರ್ಮ;
ನೇಗಿಲ ಮೇಲೆಯೆ ನಿಂತಿದೆ ಧರ್ಮ.

# ಸುಗ್ಗಿಹಾಡು

೧

ಬನ್ನಿರಿ, ಬನ್ನಿರಿ, ಮಣ್ಣಿನ ಮಕ್ಕಳೆ,
ರೈತರೆ, ನೇಗಿಲ ಯೋಗಿಗಳೆ!
ಕಾಡಿನ ಬಂಟರೆ, ಮುಗಿಲಿನ ನಂಟರೆ,
ಪೈರಿನ ಗೆಳೆಯರೆ, ಭೋಗಿಗಳೆ!
ಸುಗ್ಗಿಯ ಹಬ್ಬದ ಹಾಡನು ಹಾಡಿ,
ಸುಗ್ಗಿಯ ಸೊಬಗಿನ ಕುಣಿತವ ಮಾಡಿ,
ಬನ್ನಿರಿ, ಬನ್ನಿರಿ, ಹೊಳೆಗಳ ಗೆಳೆಯರೆ,
ಭೂಮಿಯು ಹಾಡಿದ ಗೀತೆಗಳೆ!
ತೆಂಕಣ ಗಾಳಿಯು ಬೀಸುತಿದೆ,
ತೆನೆಗಳ ಕಂಪನು ಸೂಸುತಿದೆ;
ಹೊನ್ನಿನ ಹೊಲಗಳು ಮೆರೆಯುತಿವೆ,
ಚಿನ್ನದ ತೆರೆಗಳು ಕರೆಯುತಿವೆ!
ಸೊಬಗಿನ ಸುಗ್ಗಿಗೆ ಸ್ವಾಗತವೀಯಲು
ಚೋರೆಯು, ಲಾವುಗೆ, ಕೋಗಿಲೆ, ಗಿಣಿಗಳು
ಕನಸಿನ ಪದಗಳ ಹಾಡುತಿವೆ;
ಚಿಗುರಿನ ಹಸುರಿನ ವಸನವ ಹೊದೆದು
ಹೂವಿನ ಮೊಗ್ಗಿನ ಬೆಡಗನು ತಳೆದು
ಬನಗಳು ನಲಿನಲಿದಾಡುತಿವೆ!
ಸುಗ್ಗಿಯ ಹಾಡುತ ಕುಣಿಯುತ ಬನ್ನಿ,
ಮಣ್ಣಿನ ಮಕ್ಕಳಿರ;
ಹಿಗ್ಗುತ ಸುಗ್ಗಿಯ ಸಗ್ಗವ ತನ್ನಿ
ನೆಲಸಿರಿಯೊಕ್ಕಲಿರ!

೨

ನಮ್ಮ ಕೈಗಳೆ ಭೂಮಿಗಿಳಿದಿಹ ಕಲ್ಪವೃಕ್ಷಗಳು,
ನಮ್ಮ ಕಾಲುಗಳಿಳೆಗೆ ಬಂದಿಹ ಕಾಮಧೇನುಗಳು;
ಕೆಸರು ದೂಳುಗಳಿಂದ ಕೆದರಿದ
ನಮ್ಮ ತಲೆ ವೈಕುಂಠವು!
ಬಿಸಿಲ ಬೇಗೆಗೆ ಬೆಂದು ಕಂದಿಹ
ನಮ್ಮ ಎದೆ ಕೈಲಾಸವು!

ನಮ್ಮ ಬೆವರಿಳಿದಿಳೆಗೆ ಬೀಳುವ-
ವರೆಗು ಗಂಗೆಯು ಬತ್ತಳು;
ನಮ್ಮ ಕರ್ಮದ ಮಂತ್ರದಿಂದಲೆ
ಬರದ ಮಾರಿಯು ಸತ್ತಳು;
ನಮ್ಮ ಕಂಗಳ ಕಾಂತಿಯಿಂದಲೆ
ದಿನವು ಹರಿವುದು ಕತ್ತಲು!
ನಮ್ಮ ಜೀವವೆ ಲಕ್ಷ್ಮಿದೇವಿಗೆ ಹೊಳೆವ ಮಾಂಗಲ್ಯ,
ನವಿಲವಾಹನೆ ಬಿಜ್ಜೆಯರಸಿಗೆ ನಾವೆ ಮೂಗುತಿಯು.
ಉತ್ತು ಬಿತ್ತುವುದೆಮ್ಮ ಜಪತಪ, ಗೈಮೆ ಗಾಯತ್ರಿ;
ನಮ್ಮ ಬಾಳ್ಮೆಯೆ ಕೆಡದೆ ಬೆಳಗುವ ಮಂಗಳಾರತಿಯು!
ನಮ್ಮ ತೋಟವೆ ಸಾಂಖ್ಯವು-ಮೇ
ಣೆಮ್ಮ ತಿಮ್ಮನೆ ಕಪಿಲನು!
ನಮ್ಮ ಗದ್ದೆಯೆ ಯೋಗವು-ಮೇ
ಣೆಮ್ಮ ರಂಗ ಪತಂಜಲ!
ನಮ್ಮ ಬಾಳಿದು ಬಿಡುವೆ ಇಲ್ಲದ ಕಠಿನ ಸಾಧನವು;
ನಮ್ಮ ಸೇವೆಯೆ ಮಣ್ಣು ಬೋಧಿಸಿದೆಮ್ಮ ವೇದಾಂತ!
ನಾವೆ ಹರಿಯುವ ಗಂಗೆಯು!
ನಾವೆ ಮಂಗಳ ಕಾಶಿಯು!
ನಮ್ಮ ಎದೆಗಳಲಿಹವು ಮಾಸದ
ದೇವನೊತ್ತಿರುವಡಿಗಳು;
ಲೋಕರಕ್ಷಕ ನಿಚ್ಚ ನೆಲೆಸಿಹ
ನಾವೆ ಚಲಿಸುವ ಗುಡಿಗಳು!
ಬನ್ನಿ ಬನ್ನಿರಿ ಮಣ್ಣಮಕ್ಕಳೆ, ಕರ್ಮಯೋಗಿಗಳೆ,
ಸುಗ್ಗಿ ಹಾಡನು ಹಾಡಿ ಕುಣಿಯಿರಿ, ತ್ಯಾಗಿ ಭೋಗಿಗಳೆ!

೩

ರೈತರೆಲ್ಲರೇಳಿ ಬನ್ನಿ ಸುಗ್ಗಿ ಕುಣಿತಕೆ!
ಹಾಡಿ ಬನ್ನಿ, ಕೂಡಿ ಬನ್ನಿ, ಸುಗ್ಗಿ ಕುಣಿತಕೆ!
ನಮ್ಮ ಕುಳದ ಗೆರೆಯ ಪಯಣ ಮುಕ್ತಿಮಾರ್ಗವು,
ಅತಿ ಸಮೀಪದಲ್ಲೆ ಇರುವುದೆಮ್ಮ ಸ್ವರ್ಗವು!
ಹಾಡಿ, ಸಗ್ಗ ನಲಿಯಲಿ-ನಲಿ
ದಾಡಿ, ಮುಕ್ತಿಯೊಲಿಯಲಿ!
ಹಾಡಿ, ಚಾಗ ಕುಗ್ಗಲಿ-ನಲಿ
ದಾಡಿ ಭೋಗ ಹಿಗ್ಗಲಿ!

ಜನುಮ ಜನುಮಗಳಲಿ ಯೋಗಿವರ್ಯರೆಲ್ಲರು
ಯೋಗದಿಂದ ಸಾಧಿಸಿದ
ಪರಮಪುರುಷನಮಲಪದ
ತಮ್ಮ ಎದೆಯೊಳೆಂದು ರೈತಜನರು ಬಲ್ಲರು!
ಬರುತ ನಾವು ಮೈಮೆ ಮುಗಿಲ
ನೆಳೆದುಕೊಂಡೆ ಬರುವೆವು;
ಹೆಗಲ ಮೇಲೆ ಸಗ್ಗ ಸೊಗವ
ಹೊತ್ತು ತಿರೆಗೆ ತರುವೆವು!
ಮಣ್ಣಿನಿಂದ ಅನ್ನ ತೆಗೆವ ನಮ್ಮ ಕುಳಗಳು
ಸಗ್ಗವನ್ನೆ ದಿನವು ತೆರೆವ ಕೀಲಿ ಕೈಗಳು!
ರೈತರೆಲ್ಲರೇಳಿ ಬನ್ನಿ ಸುಗ್ಗಿಕುಣಿತಕೆ;
ಹಾಡಿ ಬನ್ನಿ, ಕೂಡಿ ಬನ್ನಿ, ಸುಗ್ಗಿಕುಣಿತಕೆ!

೪

ಚಂಡುಹೂ, ತುಂಬೆಹೂ, ಗೊಂಡೆಹೂ, ದಂಡೆಹೂ,
ಕೆಂಪುಹೂ, ಹಳದಿಹೂ, ನೀಲಿಹೂ, ಬಿಳಿಯಹೂ,
ಬಣ್ಣ ಬಣ್ಣದ ಹೂವುಗಳನೆಲ್ಲ ಕೊಯ್ದು;
ಮಾವಿನೆಲೆ, ಹಲಸಿನೆಲೆ, ಬಿಲ್ವದೆಲೆ, ಅರಳಿ ಎಲೆ,
ತೆಂಗಿನೆಲೆ, ಅಡಿಕೆ ಎಲೆ, ಸಿಂಗರದ ಹೂವಿನೆಲೆ,
ಬಣ್ಣ ಬಣ್ಣದ ತಳಿರುಗಳನೆಲ್ಲ ಆಯ್ದು;
ಕಣ್ಣು ಕಣ್ಣಿನ ತೋರಣಂಗಳನು ನೆಯ್ದು

ಗದ್ದೆಗಳ ತೋಟಗಳ ಪೂಜಿಸುವ ಬನ್ನಿ!
ಹೂವುಗಳ ತನ್ನಿ, ಹಣ್ಣುಗಳ ತನ್ನಿ;
ಭೂಮಿದೇವಿಗೆ ಎಲ್ಲ ಅರ್ಪಿಸುವ ಬನ್ನಿ!
ಮಾಲೆಗಳ ಮಾಡಿ ಲೀಲೆಗಳನಾಡಿ,
ಭೂಮಿದೇವಿಗೆ ನಿಮ್ಮ ವಂದನೆಯ ನೀಡಿ;
ತಾಳಗಳ ಬಡಿದು, ಜಾಗಟೆಯ ಹೊಡೆದು,
ಗಿರಿವನವನೆಬ್ಬಿಸುವ ಶಂಖಗಳನೂದಿ!
ಬನದಮ್ಮ ಜಲದಮ್ಮ ನೆಲದಮ್ಮರೆಲ್ಲ
ಹಿಗ್ಗಿ ಹರಸುವ ತೆರದಿ ಸುಗ್ಗಿಯನು ಹಾಡಿ!
ಎದ್ದೇಳಿ! ಎದ್ದೇಳಿ! ರೈತರೆಲ್ಲರು ಏಳಿ!
ನೋಡಿ! ಲೋಕವೆ ಹಿಗ್ಗಿ ಹಾಡುವುದು ಕೇಳಿ,
ಸುಗ್ಗಿ ಹಬ್ಬವ ಮಾಡಿ ಚಿರವಾಗಿ ಬಾಳಿ!

೫

ಹಾಡಿರಿ, ಹಾಡಿರಿ ಹಕ್ಕಿಗಳೇ, ನಿಮ್ಮ
ಕೂಡುತ ನಾವೆಲ್ಲ ಹಾಡುವೆವು!
ಹೊಳೆಯಿರಿ, ಹೊಳೆಯಿರಿ ಚುಕ್ಕಿಗಳೇ, ನಿಮ್ಮ
ಮೀರಿಸಿ ನಾವೆಲ್ಲ ಹೊಳೆಯುವೆವು!
ನಲಿಯಿರಿ, ನಲಿಯಿರಿ ಕಾಡುಗಳೇ, ನಮ್ಮ
ಹೂವಿನ ಪಂಜಿನ ಬೀಡುಗಳೇ, ನಿಮ್ಮ
ನಲ್ಮೆಯೊಳಾವೆಲ್ಲ ಕೂಡುವೆವು!
ಹರಿಯಿರಿ, ಹರಿಯಿರಿ ಹೊಳೆಗಳಿರ, ನಮ್ಮ
ಹೊಲಗಳ ಬಾಳಿನ ತೊರೆಗಳಿರ, ನಿಮ್ಮ
ಚಲನದೊಳಾವೆಲ್ಲ ಕೂಡುವೆವು!
ಸುಗ್ಗಿಯ ಹಬ್ಬವ ಮಾಡುವೆವು;
ಹಿಗ್ಗುತ ನಲಿ ನಲಿದಾಡುವೆವು!
ದುಃಖವ ದುಃಖದಿ ಕಾಡುವೆವು!
ಸುಖವನು ಸುಖದಿಂ ಬೇಡುವೆವು!
ಕುಣಿಯಿರಿ, ಕುಣಿಯಿರಿ ರೈತರಿರಖಿನಿಮ್ಮ
ಕುಣಿತಕೆ ಸಗ್ಗವೆ ಕುಣಿಯುವುದು!

ನಲಿಯಿರಿ, ಮಣ್ಣಿನ ಮಕ್ಕಳಿರ-ನಿಮ್ಮ
ನಲ್ಮೆಗೆ ಮುಕ್ತಿಯೆ ನಲಿಯುವುದು!

೬

ಬನ್ನಿ ಹೋಗುವ, ಮಾಮರಂಗಳ
ನೆಳಲ ತಂಪೊಳು ತೇಲುವಾ!
ಬನ್ನಿ ತೆಂಗಿನ ಕೌಂಗು ಬಾಳೆಯ
ಬನದೊಳಾಡುತ ಸೋಲುವಾ!
ಬನ್ನಿ ಸೃಷ್ಟಿಯ ಸೊಬಗಿನಲ್ಲಿಯೆ
ಶಿವನ ರೂಪನು ನೋಡುವಾ!
ಬನ್ನಿ ಕಷ್ಟದ ಬೆವರಿನಲ್ಲಿಯೆ
ಅವನ ಪೂಜೆಯ ಮಾಡುವಾ!
ಶಿವನು ಕೊಟ್ಟೀ ಭೂಮಿಯನು ನಾ-
ವೊಲಿಯಲಾರದೆ ಹೋದರೆ
ಮುಂದೆ ಬರುವಾ ಸಗ್ಗವನು ನಾ -
ವೆಂತು ಒಲಿವೆವು, ರೈತರೇ?

ಒಂದು ಮಣ್ಣಿನ ಹೆಂಟೆಯುರೆದು
ಒಂದು ನೀರಿನ ಹನಿಯನೆರೆದು
ಒಂದು ಗೇಣಿನ ನೆಲವನುತ್ತು
ಒಂದು ಬೀಜವನಲ್ಲಿ ಬಿತ್ತಿ
ಒಂದು ಹುಲ್ಲೆಸಳನ್ನು ಬೆಳೆಸುವ-
ನಾವನಾತನಿಗೆ
ಎಲ್ಲ ಜಪತಪದಿಂದಲೊದಗುವ,
ಎಲ್ಲ ಸಾಧನದಿಂದಲೊದಗುವ,
ಯೋಗ ಚಾಗಗಳೆಲ್ಲ ತೋರುವ,
ವೇದ ಮಂತ್ರಗಳೆಲ್ಲ ಸಾರುವ
ನಿತ್ಯವಾಗಿಹ ಪರಮಪದದಾ-
ನಂದವಾಗುವುದು!
ನಮ್ಮ ಕಷ್ಟಕೆ ನಷ್ಟವಿಲ್ಲವು, ನಾವೆ ಚಾಗಿಗಳು!

ಬ್ರಹ್ಮಸೃಷ್ಟಿಯ ದಿವ್ಯದೃಷ್ಟಿಗೆ ನಾವೆ ಯೋಗಿಗಳು:
ಬನ್ನಿ ಬನ್ನಿರಿ ರೈತರೆಲ್ಲರು
ಸುಗ್ಗಿ ಕುಣಿತವ ಕುಣಿಯುವಾ!
ತನ್ನಿ ಕರ್ಮದ ಪುಣ್ಯಫಲಗಳ,
ಹಿಗ್ಗಿ ತಣಿಯುವ, ದಣಿಯುವಾ!

೧೨-೧೧-೧೯೨೭

## ತವರೂರು

ಎಲ್ಲಿರುವುದು ನಾ ಸೇರುವ ಊರು?
ಬಲ್ಲಿದರರಿಯದ, ಯಾರೂ ಕಾಣದ
ಎಲ್ಲಿಯು ಇರದಾ ಊರು!
ಭವಭಯವಿಲ್ಲದ ಊರಂತೆ
ದಿವಿಜರು ಬಯಸುವ ಊರಂತೆ
ತವರೂರಂತೆ, ಬಹುದೂರಂತೆ,
ಕವಿಗಳು ಕಂಡಿಹ ಊರಂತೆ!
ಎಲ್ಲಿರುವುದು ನಾ ಸೇರುವ ಊರು?
ಬಲ್ಲಿದರರಿಯದ, ಯಾರೂ ಕಾಣದ,
ಎಲ್ಲಿಯು ಇರದಾ ಊರು!

ಅಲ್ಲಿರುವುದು ನಾ ಸೇರುವ ಊರು!
ಬಲ್ಲಿದರರಿತಾ, ಎಲ್ಲರು ಕಾಣುವ,
ಎಲ್ಲಿಯು ಇರುವಾ ಊರು!
ಜ್ಞಾನಿಗಳಿರುವುದೆ ಆ ಊರು.
ಧ್ಯಾನದ ಮೇರೆಯೆ ಆ ಊರು.
ನಾನಿಹ ಊರು, ಸಮೀಪದ ಊರು,
ಮೌನತೆಯಾಳುವ ತವರೂರು!
ಅಲ್ಲಿರುವುದು ನಾ ಸೇರುವ ಊರು,
ಬಲ್ಲಿದರರಿತಾ, ಎಲ್ಲರು ಕಾಣುವ,
ಎಲ್ಲಿಯು ಇರುವಾ ಊರು!

## ಗೋಮಟೇಶ್ವರ

ಶ್ರೀ ಗೋಮಟೇಶ್ವರಾ, ಗೂಢತರ ಮೌನದಿಂ
ದೇಕಾಂಗಿಯಾಗಿ ನೀನಿಂತು ನಿಂತು
ಶತಮಾನಗಳನೆಷ್ಟ ದಣಿವ ಕಾಣದೆ ಕಳೆದೆ?
ಸ್ಥೈರಣೆಯದಾವುದೈ? ಯಾವ ಶಾಂತಿ
ನಿನ್ನ ಹೃದಯವನೊಲಿದು ನಿತ್ಯತೆಯ ನೀಡಿತೈ
ಕಾಲದಾ ಕೋಟಲೆಯ ಸಹಿಸುವಂತೆ?
ನೀಲ ನಭದೊಳು ಶಿರವ ಭೂತಳದಿ ಚರಣಗಳ
ನಿರಿಸಿ ಪರವಿಹಗಳಂ ಸಂಧಿಸಿರುವೆ!
ನಿನ್ನ ಮೌನದ ಮೊಳಗನಾಲಿಸುತಲಿಹುದೀ ಜಗಂ;
ನಿನ್ನ ಕಂಗಳ ಮಿಂಚ ನೋಡುತಿದೆ ಧರೆಯ ನಯನಂ;
ನಿನ್ನೆದೆಯ ಸಿಡಿಲೆರಗುತಿದೆ ವಿಸ್ಮಯಾಶ್ಚರ್ಯದಿಂ;
ನಿನ್ನ ದಯದಾ ವರ್ಷವಿಳೆಗೀವುದಾನಂದಮಂ!

ಯೋಗೀಶ, ನಿನ್ನಾ ಪ್ರಶಾಂತವದನದೊಳೆಸೆವ
ನಸುನಗೆಯ ಭಾವಸೂಚನೆಯದೇನೈ?
ಸಿದ್ಧಪುರುಷರ ಮೊಗದ ನಿತ್ಯ ಮಂದಸ್ಮಿತಮೊ?
ಬ್ರಹ್ಮದಾನಂದನಾ ಪ್ರತಿಬಿಂಬಮೊ?
ಮೇಣಿಳೆಯ ನಿನ್ನಣುಗರವಿವೇಕಮಂ ನೋಡಿ
ನಗುವ ಕರುಣಾರಸದ ಪರಿಹಾಸ್ಯಮೊ?
ನಿರ್ವಾಣಪದಕೇರ್ದ ನಿನ್ನನುಂ ನಗಿಪೆಮ್ಮ
ತಿಳಿಗೇಡಿತನದ ಮಾಮಹಿಮೆಯೆನಿತು?

ನಿನ್ನಡಿಯ ಪೀಠದಡಿಯುರುಳುತಿರೆ ಕಾಲಚಕ್ರಂ
ಸೌಮ್ಯಭಾವವ ತೋರಿ ನಿಂತಿರುವೆಯಚಲಮಾಗಿ:
ಧಾರಿಣಿಯ ಗಲಿಬಿಲಿಯ ಸಹಿಸಲಾನಂದದಿಂದ
ನಿನ್ನಚಲತೆಯೊಳಿನಿತ ನೀಡೆಮಗೆ, ಗೋಮಟೇಶ!

ಚಕ್ರಾಧಿಪತ್ಯಂಗಳುದಿಸಿಯಳಿದುವು ಬೆಳಗಿ,
ಚಕ್ರೇಶರಮಿತರೊರಗಿದರು ಧರೆಗೆ;
ಮಕುಟಗದ್ದಿಗೆಯೆಲ್ಲ ಕೆನ್ನೀರಸಾಗರದಿ
ಮುಳುಮುಳುಗಿ ತೇಲಿದುವು ರೋಷದಿಂದ.
ಉನ್ಮತ್ತ ಖಡ್ಗಗಳ ಝಣ ಝಣತ್ಕಾರಮೀ
ಧರೆಯೆದೆಯ ಕಂಪಿಸಿತು ಮಾತ್ಸರ್ಯದಿ.
ಶಾಂತವಾಣಿಗಳೆಲ್ಲ ಮುಳುಗಿದುವು; ಲೋಕಮಂ
ತುಂಬಿದುದು ಹಾಕಾರದಾವೇಶವು.
ಕಿವಿಯೊಳಿಹುದಿಂದಿಗೂ ರಣಗಳಾ ಘೋರನಾದಂ;
ಕೆಂಬೊನಲನಾವಗಂ ನೋಡುತಿದೆ ನಿನ್ನ ನಯನಂ;
ಕಾಲದೇಶಗಳಲ್ಲಿ ಚಲಿಸದಿವೆ ಚಿತ್ರದಂತೆ;
ಆದೊಡಂ ನೀಂ ಸದಾ ಶಾಂತನೈ, ಗೋಮಟೇಶ!

ಬೇಹುಗಾರನೊ? ದೇವದೂತನೊ? ಬೋಧಕನೊ?
ಸಾಕ್ಷಿಯೋ? ಪರದಿಳೆಯ ಪಹರೆಯವನೊ?
ವೈಕುಂಠದಾ ದ್ವಾರಪಾಲಕನೊ? ನಿರ್ವಾಣ
ಮೂರ್ತಿಯೋ? ಮೇಣಭಯದಾಕಾರಮೊ?
ವೇಷಾಂತರವನಾಂತು ಧರೆಗಿಳಿದ ಭೈರವನೊ?
ಶಾಂತಿಯಾನಂದಗಳ ನಿಜರೂಪಮೊ?
ಮೇಣೆಮ್ಮ ದಿವ್ಯಾತ್ಮನ ಮಹಾ ಪ್ರಕಾಶಮೋ,
ಪೇಳೆಲೈ ನೀನಾರು, ಗೋಮಟೇಶ?
ವಾದಿಸುವ ಒಣ ವೇದಪಂಡಿತರ ನೋಡಿ ನೋಡಿ
ದರ್ಶನಗಳಾಚಾರ್ಯರಾಟೋಪಮಂ ಕಂಡು ನೀಂ
ನಿರ್ವಾಣ ತಾನನಿರ್ವಚನೀಯಮೆಂಬ ನಿಜಮಂ
ತಿಳಿಸಲೇಂ ಮೌನವ್ರತವಾಂತೆಯೋ, ಮೌನಿವರ್ಯ?

ಭಾರತಿಗೆ ಪರಕೀಯರೆಸಗಿದನ್ಯಾಯಮಂ
ಕಣ್ಣಾರ ಕಂಡ ನೀಂ ನಿತ್ಯಸಾಕ್ಷಿ.
ಆಕೆಯಾಭರಣಮಂ ಮೋಸದಿಂ ಸುಲಿದುದಕೆ

ಬ್ರಹ್ಮನಾಸ್ಥಾನದೊಳು ನೀನೆ ಸಾಕ್ಷಿ.
ಬಲಗೈಯ ಖಡ್ಗದಿಂದೆಡಗೈ ಕೊರಾನಿನಿಂ
ಭಾರತಿಯ ಪೀಡಿಸಿದ ಮುಸಲದಳಮಂ,
ಮೇಲೆ ಕ್ರಿಸ್ತನನಿರಿಸಿಯೊಳಗೆ ಸೈತಾನನಂ
ಮರೆಮಾಡಿ ಹೇಮಾಭಿಲಾಷೆಯಿಂದ
ವಾರಿಧಿಯ ದಾಂಟಿ ಬೇಹಾರಕೈತಂದರಂ,
ಕ್ರಿಸ್ತವೇಷವನಾಂತ ಸೈತಾನನಾಚಾರದಿಂ
ಭಾರತಿಯ ಪಣೆಯಿಂದ ಪದಕಿಳಿದ ಶೋಣಿತಮುಮಂ
ನೋಡಿರುವೆಯದರಿಂದ ಭಾರತಿಗೆ ನೀನೆ ಸಾಕ್ಷಿ!

ಬಾಲನಂತಿಹನೆಂಬರಾರ್ಹಂತ್ಯನಾದವಂ
ಮಾಹಾತ್ಮ್ಯಗಾವಗಂ ಕುರುಹು ದೈನ್ಯಂ!
ರವಿಶಶಿಗಳುಡುಗಣಗಳೊಡನೆ ಪಿಸುಮಾತಾಡಿ
ನಿಂತೊಡಂ ಮೇಘಗಳನಾಲಿಂಗಿಸಿ,
ನಿನ್ನ ಭೀಮಾಕಾರ ತಾಗದೆಮ್ಮಯ ಮನಕೆ;
ವಿಭುವಾದೊಡಣುಭಾವವೀಯುತಿರುವೆ!
ಕಣ್ಗೆ ಭೀಮಾಕಾರವಾಂತೊಡಂ, ಮನಕೆ ನೀಂ
ರಾಮನಂತಭಿರಾಮತರಮಾವಗಂ!
ನಿನ್ನ ಪೂಜಿಪ ಭಕ್ತರೀ ಧರೆಯ ಬಡಜನಗಳಂ
ಬರದಿಂದ ಪೊರೆಯದೆಯೆ, ಘೃತತೈಲವಾಹಿನಿಗಳಿಂ
ನಿನಗೆ ಜಳಕಂ ಗೈವುದಂ ಕಂಡು ಧರ್ಮಮುನಿಸಿಂ
ಪರಿಹಾಸ್ಯಮಾಡಿ ನಸುನಗುತಲಿಹೆ, ಗೋಮಟೇಶ!

ಹಂಗಿಸುತ ಕಾಲನಂ, ಚಾಳಿಸುತ ಸೃಷ್ಟಿಯಂ,
ಲಯವನಣಕಿಸುತ ನಿಂತಿರುವೆ ನೀನು.
ನಿನ್ನ ನೋಡಿದ ಹೃದಯದೊಳು ನೀನಿರದೆಯುದಿಸಿ
ನಿನ್ನಾತ್ಮದಭಯಮಂ ತುಂಬುತಿರುವೆ.
ಹೇ ಮಹಾಪ್ರಹರಿಯೇ, ನಿನ್ನ ನಿರ್ವಾಣದಾ
ದಿವ್ಯ ನಿರ್ಲಕ್ಷ್ಯತೆಯನೆಮಗೆ ನೀಡೈ.
ನಿನ್ನ ವಿಭುತನ ಪರವನಾವರಿಸಿಳೆಯ ಮೀರಿ
ಶೂನ್ಯದಳಲಾನಂದವೀಂಟುತಿಹುದು.
ಜಯತು ಜಯ ರಮ್ಯಕನ್ನಡನಾಡ ಧರ್ಮಮೂರ್ತಿ!
ಜಯತು ಕರ್ಣಾಟಕದ ಶಿಲ್ಪಿವರರಮಲಕೀರ್ತಿ!

ಜಯ ಜಯಾ ನಿರ್ವಾಣಗತಿಗೇರ್ದ ಯೋಗೀಶ್ವರಾ!
ಜಯ ಜಯಾ ಜಯತು ಶ್ರೀಗೋಮಟೇಶಾಧೀಶ್ವರಾ!

ಬ್ರಹ್ಮಸೃಷ್ಟಿಯ ಕೌತುಕವ ಕಿರಿದುಮಾಡೆ ನೀಂ
ಸೃಷ್ಟಿಸಿದ ಮೂರ್ತಿಯಿದೊ, ಶಿಲ್ಪಿವರ್ಯ?
ವಿಶ್ವಭಾವವನೊಂದೆ ವಿಗ್ರಹದಿ ಗೆಲಲೆಂದು
ಸ್ಪರ್ಧೆಯಿಂ ಕೆತ್ತಿದುದೊ, ಶಿಲ್ಪಿತಿಲಕ?
ಭಾವಿಸಿದೆ ಮೂರ್ತಿಯಂ: ಬ್ರಹ್ಮನಂ ಧ್ಯಾನಿಸಿದೆ;
ಕೆತ್ತಿದೈ ತಾಳ್ಮೆಯಿಂ: ಸಾಧನೆಯದು;
ಶ್ರೀ ಗೋಮಟೇಶ್ವರನ ವಿಗ್ರಹವ ಪೂರೈಸೆ
ಬ್ರಹ್ಮಸಾಕ್ಷಾತ್ಕಾರಮಾಯ್ತು ನಿನಗೆ!
ಧ್ಯಾನವಾವುದು ನಿನ್ನ ಕಲ್ಪನೆಯ ಮೀರಲರಿಗುಂ?
ನಿನ್ನ ಸಾಧನೆ ಯಾವ ಯೋಗಸಾಧನೆಗೆ ಹೀನಂ?
ನಿನ್ನ ಸಿದ್ಧಿಗೆ ಪಿರಿದದಾವುದೈ, ಶಿಲ್ಪಿಸಿದ್ಧ?
ನೀನೆ ಜೀವನ್ಮುಕ್ತ! ನಿನ್ನದೈ ಬ್ರಹ್ಮಯೋಗಂ!

೧೭-೬-೧೯೨೮

## ಮುಂದಕೆಲ್ಲಿಗೆ?

ಮೊದಲನರಿಯದಾದಿಯಿಂದ
ಆದಿ ತಿಮಿರದುದರದಿಂದ
ಮೂಡಿ ಬಂದೆನು;
ಯಾರ ಬಯಕೆ ಎಂಬುದರಿಯೆ;
ಏಕೆ ಎಲ್ಲಿಗೆಂಬುದರಿಯೆ;
ಮುಂದೆ ಹರಿಯುವೆ!

ಮಲಗಿ ಕಲ್ಲು ಮಣ್ಣುಗಳಲಿ,
ಜಡ ಸುಷುಪ್ತಿಯಲ್ಲಿ ಬಳಲಿ
ಯುಗಗಳಾದುವು!
ಸಸ್ಯಗಳಲಿ ಕನಸ ಕಂಡು,
ಹುಟ್ಟು ಬಾಳು ಸಾವನುಂಡು
ಕಲ್ಪ ಹೋದುವು!

ಮರಳಿ ಮೈಯ ತಿಳಿದು ತಿರುಗಿ
ಮಿಗಗಳಂತೆ ಮೂಡಿ ಮರುಗಿ
ಬಹಳ ಬಳಲಿದೆ.
ಇಂದು ಮನುಜ ಜನ್ಮದಲ್ಲಿ
ಬಂದು ಹಾಡುತಿರುವೆನಿಲ್ಲಿ!
ಮುಂದಕೆಲ್ಲಿಗೆ?

೧೦-೧-೧೯೨೯

## ನನ್ನ ಮನೆ

ಮನೇ ಮನೇ ಮುದ್ದು ಮನೇ
ಮನೇ ಮನೇ ನನ್ನ ಮನೇ!

ತನ್ನ ತಾಯಿಯೊಲಿದ ಮನೆ,
ನನ್ನ ತಂದೆ ಬಳೆದ ಮನೆ;
ನನ್ನ ಗೆಳೆಯರೊಡನೆ ಕೂಡಿ,
ಮುದ್ದು ಮಾತುಗಳನು ಆಡಿ,
ಮಕ್ಕಳಾಟಗಳನು ಹೂಡಿ
ನಾನು ನಲಿದ ನನ್ನ ಮನೆ!

ನನ್ನ ಗಿರಿಜೆಯಿದ್ದ ಮನೆ,
ನನ್ನ ವಾಸುವಿದ್ದ ಮನೆ;
ಮನೆಯ ಮುತ್ತಿ ಬರಲು ಚಳಿ,
ಆಳು ಮಂಜ ಒಲೆಯ ಬಳಿ
ನಮ್ಮನೆಲ್ಲ ಕತೆಗಳಲಿ
ಕರಗಿಸಿದ್ದ ನನ್ನ ಮನೆ!

ತಾಯಿ ಮುತ್ತು ಕೊಟ್ಟ ಮನೆ,
ತಂದೆ ಎತ್ತಿಕೊಂಡ ಮನೆ;
ಮನೆಗೆ ಬಂದ ನೆಂಟರೆಲ್ಲ
ಕೂಗಿ ಕರೆದು ಕೊಬರಿ ಬೆಲ್ಲ
ಗಳನು ಕೊಟ್ಟು, ಸವಿಯ ಸೊಲ್ಲ
ನಾಡುತಿದ್ದ ನನ್ನ ಮನೆ!

ನಾನು ನುಡಿಯ ಕಲಿತ ಮನೆ,
ನಾನು ನಡಿಗೆಯರಿತ ಮನೆ;
ಹಕ್ಕಿ ಬಳಗ ಸುತ್ತ ಕೂಡಿ
ಬೈಗು ಬೆಳಗು ಹಾಡಿ ಹಾಡಿ
ಮಲೆಯನಾಡ ಸಗ್ಗ ಮಾಡಿ
ನಲಿಸುತಿದ್ದ ನನ್ನ ಮನೆ!

ನಾನು ಬಿದ್ದು ಎದ್ದ ಮನೆ,
ಮೊದಲು ಬೆಳಕು ಕಂಡ ಮನೆ;
ತಿಪ್ಪ ತಿಪ್ಪ ಹೆಜ್ಜೆಯಿಟ್ಟು,
ಬಿಸಿಲ ಕೋಲ ಹಿಡಿದು ಬಿಟ್ಟು,
ತಂಗಿ ತಮ್ಮರೊಡನೆ ಹಿಟ್ಟು
ತಿಂದು ಬೆಳೆದ ನನ್ನ ಮನೆ!

ಮೊದಲ ಮಿಂಚು ಹೊಳೆದ ಮನೆ,
ಮೊದಲ ಗುಡುಗು ಕೇಳ್ದ ಮನೆ;
ಮೊದಲ ಮಳೆಯು ಕರೆದು ಕರೆದು,
ಹೆಂಚಮೇಲೆ ಸದ್ದು ಹರಿದು,
ಮಾಡಿನಿಂದ ನೀರು ಸುರಿದು
ಬೆರಗನಿತ್ತ ನನ್ನ ಮನೆ!

ನನ್ನ ಐಗಳಿದ್ದ ಮನೆ,
ಮರಳು ತಿದ್ದಿ ಬರೆದ ಮನೆ;
ಬುವಿಯು ಕೊಟ್ಟ ಸಗ್ಗದಂತೆ,
ಬಂಧ ಕೊಟ್ಟ ಮುಕ್ತಿಯಂತೆ,
ದುಃಖ ಹೆತ್ತ ಸುಖಗಳಂತೆ
ತಿರೆಯ ಸಿರಿಯ ನನ್ನ ಮನೆ!

ಹೆತ್ತ ತಾಯಿ ಸತ್ತ ಮನೆ,
ಮತ್ತೆ ತಂದೆ ಹೋದ ಮನೆ;
ಗಿರಿಜೆ ನರಳಿ ಬಿಟ್ಟ ಮನೆ,
ವಾಸು ಬೆಂದು ಸಂದ ಮನೆ,
ಬಾಲ್ಯ ಬಾಡಿ ಬಿದ್ದ ಮನೆ,
ಆದರೆನಗೆ ನನ್ನ ಮನೆ!

ಕಬ್ಬಗಳನು ಕಂಡ ಮನೆ,
ಹಬ್ಬದೂಟ ಉಂಡ ಮನೆ;
ಅಜ್ಜಿ ಅಜ್ಜರೆಲ್ಲರಿದ್ದು,
ಕೆಳದಿ ಕೆಳೆಯರೆಲ್ಲರಿದ್ದು
ಬಾಳಿ ಬದುಕಿ ನರಳಿ ಬಿದ್ದು
ಮಾಯವಾದ ನನ್ನ ಮನೆ!

ನಾನು ಬಾಳುತಿರುವ ಮನೆ,
ತಮ್ಮ ತಿಮ್ಮ ಇರುವ ಮನೆ;
ತಂಗಿ ಬಂದು ಹೋಗುತಿರುವ,
ಹಕ್ಕಿ ಬಳಗ ಹಾಡುತಿರುವ,
ಕಾಡು ಮುತ್ತು ಕೊಡುತಲಿರುವ
ಸೊಬಗುವೀಡು ನನ್ನ ಮನೆ!

ಹಳ್ಳಿರಂಗನಿರುವ ಮನೆ,
ಬಳ್ಳಿ ಸಿಂಗರಿಸುವ ಮನೆ;
ಬಾವಿಕಟ್ಟೆ ಬಳಿಯೊಳಂದು,
ತಾಯಿತಂದೆ ಬಳಗ ಮಿಂದು
ನಿಲಲು, ನೆಳಲ ನೀಡಿದೊಂದು
ತೆಂಗು ಇರುವ ನನ್ನ ಮನೆ!

ಹಿರಗ ಕೊಳಲ ನುಡಿದ ಮನೆ,
ಹಣ್ಣು ತಂದು ಕೊಟ್ಟ ಮನೆ;
ತುರುಗಳೆಲ್ಲ ‘ಅಂಬ’ ಎಂದು,
ಕರುಗಳನ್ನು ಕರೆದು ಬಂದು,
ಒಂದು ದಿನವು ಕಳೆಯಿತೆಂದು
ಎಚ್ಚರಿಸಿದ ನನ್ನ ಮನೆ!

ತಾಯಿ ಮಿಂದ ಕೆರೆಯ ಮನೆ,
ಬಟ್ಟೆಯೊಗೆದ ತೊರೆಯ ಮನೆ;
ತಾಯಿಯಡಿಯ ದೂಳಿಯಿಂದ,
ತಂದೆಯುತ್ತ ಮಣ್ಣಿನಿಂದ,
ಗಿರಿಜೆ ಬಿದ್ದ ಮಟ್ಟೆಯಿಂದ,
ಮಂಗಳಾದ ನನ್ನ ಮನೆ!

ನಾನು ಬದುಕೊಳುಳಿವ ಮನೆ,
ನಾನು ಬಾಳಿಯುಳಿವ ಮನೆ;
ನನ್ನದಲ್ಲದಿಳೆಯೊಳಿಂದು,
ಹೆಮ್ಮೆಯಿಂದ ನನ್ನದೆಂದು,
ಬೆಂದು ಬಳಲಿದಾಗ ಬಂದು
ನೀರು ಕುಡಿವ ನನ್ನ ಮನೆ!

೨೭-೧೦-೧೯೨೭

## ಇನ್ನೇನು ಬೇಕೆನಗೆ ದೇವ?

ಇನ್ನೇನು ಬೇಕೆನಗೆ ದೇವ,
ಎನ್ನೆದೆಯೊಳಿರೆ ನೀನೆ ಎನ್ನ ಜೀವದ ಜೀವ?
ರವಿಯು ಮೇಲೆಸೆವುದನು ನೋಡಿ ನೋಡಿ
ಋವಿಯ ಕೊಡು ಎನಲು ಬಗೆ ಬಾರದೆನಗೆ;
ತಳಿಪ ಕೋಟ್ಯನುಕೋಟಿ ತಾರೆಗಳಿರೆ
ಮನವಿಲ್ಲಪೂರ್ವ ಹಿಮಕರನ ಪಡೆಯೆ;
ಮನ ನಿಲುಕದಸಮವಹ ವಿಶ್ವವಿರಲು
ಪಸರಿಸಿಹ ನಭವೊಂದನೊಲ್ಲೆ ನಾನು;
ನುಡಿಗೆ ಬಂದುದ ಕೇಳೆ ಬೆದರುತಿಹೆನು
ಇರುತಿರಲು ನುಡಿಗೆ ನಿಲುಕದಿಹ ಮೈಮೆ;
ಮನವಾಸೆಪಡುವುದನು ಕೇಳಲೊಲ್ಲೆ;
ಬಡಮನವು ಕಡವರವ ಕಂಡರಿಯದು.
ಇಹುದ ಕೊಡು ಎನಲು ಮನಬಾರದೆನಗೆ;
ಇರದಿಹುದು ಬೇಕೆಂಬುವಾಸೆಯುಂಟು.
ಹೇ ದೇವ, ಕೇಳೆ ನಾನೇನ ನಿನ್ನ;
ಕೇಳವ್ವಹುದನು ಕೊಡುವ ಮಹಿಮ ನೀನು.
ಎನ್ನ ಹೃದಯವೆ ನಿನ್ನ ಪೀಠವೆಂಬ
ಸನ್ಮತಿಯನೀಯಲೆನಗದುವೆ ಸಾಕು!
ಎನ್ನೆದೆಯೊಳಿರೆ ನೀನೆ, ಎನ್ನ ಜೀವದ ಜೀವ
ಇನ್ನೇನು ಬೇಕೆನಗೆ ದೇವ!

## ಕಳಚಿ ಬೀಳುವೆನಯ್ಯಾ

ಕಳಚಿ ಬೀಳುವೆನಯ್ಯಾ ನಿನ್ನ ಸಿರಿಯಡಿಗೆ
ಕಳಚಿ ಬೀಳುವೆನಯ್ಯಾ.

ತಣ್ಣೆಲರು ಬೀಸಿಬರೆ ಕರ್ಮವನು ಕಳೆದಿರುವ
ಹಣ್ಣೆಲೆಯು ಹೆತ್ತ ತಾಯ್ಮರವನಗಲಿ,
ಮುಳಿಯದೆಯೆ, ಹಳಿಯದೆಯೆ, ಮೌನದಲಿ, ದೈನ್ಯದಲಿ,
ಕಳಚಿ ತೊಟ್ಟುಳಿದು ನೆಲಕುದುರುವಂತೆ!

ಜೀವನದ ತುದಿಯಲ್ಲಿ ಕೊಟ್ಟ ಕಾರ್ಯವನೆಸಗಿ
ದೇವನೊಲ್ಮೆಯ ನಂಬಿ ಶಾಂತಿಯಿಂದ,
ಹಂಬಲಿಸಿ ಸವಿಯೊಲ್ಮೆಗಳುವ ಹೆಣ್ಣಿನ ಕಣ್ಣ
ಕಂಬನಿಯು ಮಾತಿಲ್ಲದುರುಳುವಂತೆ

೧೨-೨-೧೯೨೯

## ಬಡವನೆಂದುಸುರಲತಿ ನಾಚುವೆನು ದೇವ

ಬಡವನೆಂದುಸುರಲತಿನಾಚುವೆನು, ದೇವ,
ಪೊಡವಿಗಧಿಪತಿ ನೀನೆ ಹೃದಯದೊಳಗಿರಲು.

ನಿನಗಿಲ್ಲದಾ ಸುಖವನೆನಗೆ ದಯಪಾಲಿಸಿಹೆ,
ನಿನಗಿಲ್ಲದಾನಂದವೆನಗಿರುವುದು!
ನಿನ್ನ ಮೋಕ್ಷದ ಬಂಧವೆನಗಿಲ್ಲ, ಹೇ ದೇವ,
ಎನ್ನ ಪಾಶದ ಮೋಕ್ಷ ನಿನಗಿಲ್ಲವು!

ಮಾಯೆಯೊಳಗಲೆವ ಸುಖ ನಿನಗಿಲ್ಲ, ಎನಗಿಹುದು;
"ಮಾಯೆಯಧಿಪತಿಯೆ ಬಾ ರಕ್ಷಿಸೆಂ"ದು
ಬಾಯಬಿಟ್ಟೊರಲುವಾನಂದ ನಿನಗೆಲ್ಲಿಹುದು?
ನಿನ್ನಿರವ ಕಂಡೆನಗೆ ದುಃಖವಹುದು!

ಗುಣ ಸುಖಗಳಿಲ್ಲ; ನೀನದು ಅಲ್ಲ, ಇದು ಅಲ್ಲ;
ನಿನ್ನ ಬಾಳೆಂಬುದದು "ನೇತಿ! ನೇತಿ!"

ನಿನಗಂತು ತತ್ತ್ವಜ್ಞರಿಂದ ಉಳಿಗತಿಯಿಲ್ಲ;
ನನಗಾದರವರ ಭಯವಿನಿತಿಲ್ಲವು!

## ಘೋರಾಂಧಕಾರದೊಳು

ಘೋರಾಂಧಕಾರದೊಳು ಕಾರ್ಮುಗಿಲನುಟ್ಟು
ಮಿಂಚೆಂಬ ತೇಜಸದ ಬಳೆಯ ತೊಟ್ಟು
ಭೈರವನ ತಂಬಟೆಯ ಗುಡುಗಿನೊಳಗಿಟ್ಟು
ಬಾ, ಎನ್ನನೆಚ್ಚರಿಸು, ಜನನಿ – ಹೇ ಜವನ ಜನನಿ.

ಬಳೆಯ ಮಿಂಚಿನೊಳೆನ್ನ ಕಣ್ಣ ಜಡತನವಳಿಸು,
ಕಿವಿಯ ನಿದ್ದೆಯ ಕೆಡಿಸು ಗುಡುಗಿನಿಂದ;
ಕಾರ್ಮುಗಿಲ ರೌದ್ರದಲಿ ಎದೆಯ ಭೀತಿಯ ಬಿಡಿಸು;
ಬಾ, ಎನ್ನನೆಚ್ಚರಿಸು, ಜನನಿ – ಹೇ ಜವನ ಜನನಿ.

ಆರತಿಯ ಬೆಳಕಿನಲಿ ಕಣ್ದೆರೆಯಲಿಲ್ಲ,
ಕೊಳಲು ನಾದವ ಕೇಳಿ ಕಿವಿಯೇಳಲಿಲ್ಲ.
ಮೂರುತಿಯ ಕಂಡೆದೆಯು ಕಲ್ಲಾಗಲಿಲ್ಲ;
ಬಾ, ಎನ್ನನೆಚ್ಚರಿಸು, ಜನನಿ – ಹೇ ಜವನ ಜನನಿ.

೩-೫-೧೯೨೭

## ಹೊಲದ ಹುಡುಗಿ*

ಹೊಲದೊಳಗೊಬ್ಬಳೆ ಹಳದಿಯ ಪಯಿರನು
ಕೊಯ್ಯುವ ಬಾಲೆಯ ನೋಡಲ್ಲಿ.
ತನ್ನೊಳು ತಾನೇ ಹಾಡುತ ನಲಿವಳು
ಮೆಲ್ಲಡಿಯಿಡು, ಬಾ, ನಿಲ್ಲಿಲ್ಲಿ.
ಒಬ್ಬಳೆ ಕೊಯ್ವಳು ಹೊರೆಯನು ಮಾಡಿ
ಎದೆಯನು ಸೆಳೆಯುವ ಹಾಡನು ಹಾಡಿ;
ಆಲಿಸು! ಸದ್ದಿಲಿ ಕಣಿವೆಯ ಪೆಂಪು
ಹೆಚ್ಚಲು ಹರಿವುದು ಗಾನದ ಇಂಪು.

ಅರಬರ ದೇಶದ ಮರುಭೂಮಿಯೊಳಾ
ಯಾಸದಿ ತಿರುಗುವ ದಾರಿಗರ

ಬಳಲಿಕೆಯಾರಿಪ ಹಕ್ಕಿಯ ಹಾಡೀ
ಹುಡುಗಿಯ ಕೊರಲನು ಮೀರಿಸದು;
ಹೊಸ ಹೂದಿಂಗಳ ಬೃಂದಾವನದೊಳು
ಮೋನವನೆಚ್ಚರಗೊಳಿಸುತ ಮನದೊಳು
ಹರುಷವ ಸುರಿಸುವ ಕೋಕಿಲವಾಣಿಯ
ಜರೆವುದು ಹಾಡಿದು ಹಳ್ಳಿಯ ರಾಣಿಯ.

ಹಾಡುವಳೇನೆಂದಾರೂ ಹೇಳರೆ?
ಅವಳಾ ಕಂಠವು ಹಾಡುವುದು
ಹಿಂದಿನ ಕಥೆಗಳೊ? ದೂರದ ವ್ಯಥೆಗಳೊ?
ಪೂರ್ವ ಪುರಾಣದ ಕದನಗಳೊ?
ಅಥವಾ ನಡೆಯುವ ಈಗಿನ ಕಥೆಗಳೊ?
ಪರಿಚಿತವಾಗಿಹ ದಿನದಾ ವ್ಯಥೆಗಳೊ?
ಸ್ವಾಭಾವಿಕವಹ ಗೋಳೋ? ನೋವೋ?
ಆಗುವ ಆಗಿಹ ನೆಂಟರ ಸಾವೋ?

ಬಾಲೆಯು ಹಾಡಿದುದೇನೇ ಆಗಲಿ
ತುದಿಯೇ ಇಲ್ಲದೆ ಹಾಡಿದಳು.
ತಲೆಯನು ಬಗ್ಗಿಸಿ ಪಯಿರನು ಕೊಯ್ಯುತ
ಹಾಡುತಲಿದ್ದುದ ನೋಡಿದೆನು.
ಕೇಳಿದೆ ಮೈಯಲ್ಲಾಡದೆ ನಿಂತು.
ಬೆಟ್ಟವನೇರಿದೆನಾಲಿಸುತಿಂತು:
ಆದರು ಅವಳಾ ದನಿ ಇಂಪಾಗಿ
ಎದೆಯೊಳು ಮೊರೆಯಿತು ಕಿವಿಯನು ನೀಗಿ!

## ಗೊಲ್ಲನ ಬಿನ್ನಹ

೧

ಕಾಡಿನ ಕೊಳಲಿದು, ಕಾಡ ಕವಿಯು ನಾ,
ನಾಡಿನ ಜನರೊಲಿದಾಲಿಪುದು.
ಬೃಂದೆಯ ನಂದನ ಕಂದನೆ ಬಂದು
ಗೊಲ್ಲನ ಕೊಳಲಲಿ ನಿಂದಿಹನೆಂದು
ಭಾವಿಸಿ ಮನ್ನಿಸಿ ಲಾಲಿಪುದು.
ಬೇಸರ ಕಳೆಯಲು ಬೇಸಗೆಯಲ್ಲಿ

ತರುಗಳ ತಳಿರಿನ ತಣ್ಣೆಳಲಲ್ಲಿ
ಸುಳಿಸುಳಿದಲೆಯಲು ಬಳಲಿದ ಗಾಳಿ
ಕಂಬಳಿಯೋಡೊಳು ತಂಪೊಳು ತೇಲಿ,
ತುರುಗಳು ಮೆಲುಕನು ಮೇಯುತಿರೆ
ಕರುಗಳು ತಾಯ್ಗಳ ಹಾಯುತಿರೆ
ಪಿಳ್ಳಂಗೋವಿಯನೂದಿದೆ ನಾನು,
ಮರ ಮಿಗಗಳಿಗಾಗೂದಿದೆ ನಾನು!

೨

ಸಿರಿಬನದೇವಿಯ ಬೊಕ್ಕಸದಿಂದ
ಕದ್ದವು ಕೆಲವಿವು ಹಾಡುಗಳು;
ಸುಂದರ ಋತುಗಳ ಸಿರಿಗೈಯಿಂದ
ಸುಲಿದವು ಕೆಲವಿವು ಹಾಡುಗಳು;
ನೇಸರು ಚಂದಿರ ತಾರೆಗಳಿಂದ
ಕೆಲವನು ಭಿಕ್ಷೆಯ ಬೇಡಿದೆನು;
ಬೈಗಿನ ಹೆಣ್ಣನು ಬೆಳಗಿನ ಹೆಣ್ಣನು
ಕಾಡಿಸಿ ಕೆಲವನು ಕೂಡಿದೆನು.
ಹಗಲಿರುಳೆರಡರ ಸಂಗಮದಿಂದ
ಪಡೆದವು ಕಬ್ಬಗಳಲಿ ಕೆಲವು;
ಸುಖದುಃಖಗಳಾಲಿಂಗನದಿಂದ
ಹಡೆದವು ಹಾಡುಗಳಲಿ ಕೆಲವು;
ನೆಚ್ಚಳಿದೊಲುಮೆಯ ಕಂಬನಿ ತೆತ್ತಿಹ
ಭಾವದ ಗೀತೆಗಳಿವು ಕೆಲವು;
ಹುಡುಗಾಟದ ಸಿಂಗಾರದ ಸರಳತೆ
ಬಿನದಕೆ ಹಾಡಿದವಿವು ಕೆಲವು;
ಪರವಿಹವೆರಡರ ನವ ಅಭಿಸಾರವು
ಹೆತ್ತವು ಕೆಲವಿವು ಗಾನಗಳು;
ಜೀವನ ದೇವನ ನವ ಅನುರಾಗವು
ನೀಡಿದವಿವು ಕೆಲ ದಾನಗಳು!

೩

ಸುಗ್ಗಿಯ ಬನದಲಿ ಹಸುರಿನ ಮೇಲೆ
ಹೂವುಗಳಂದದಿ ಕೆಲವನು ಆಯ್ದೆ;
ಮಂಜಿನ ಮಣಿಗಳ ಮಾಗಿಯ ಲೀಲೆ

ಶೋಭಿಸಲದರಿಂದಿನಿತನು ಕೊಯ್ದೆ;
ವಿಪಿನ ವಿಹಂಗಮ ಕಂಠವ ಸೇರಿ
ನುಣ್ಚರಗಳ ಗೆದ್ದೆನು ಬಲು ಹೋರಿ.
ಕಾಮನಬಿಲ್ಲನು ದಾರವ ಮಾಡಿ
ಮೊಳಗನು, ಮಿಂಚನು, ಹನಿಗಳ ಬೇಡಿ
ಹಾಡುಗಳಿನಿತನು ಕೋದಿಹೆನು!
ತುಂಗೆಯ ತೆರೆಗಳ ಚುಂಬನದಿಂದ
ಸಿರಿ ಮಲೆನಾಡಿನ ಸಿರಿ ಮಡಿಲಿಂದ
ಕವನಗಳಿನಿತನು ನೆಯ್ದಿಹೆನು!

೪

ಬನಗಳೆ, ಗಿರಿಗಳೆ, ಹೊಳೆಗಳೆ, ತೊರೆಗಳೆ,
ಕೆರೆಗಳೆ, ಹೊಲಗಳೆ, ತೋಟಗಳೆ;
ತಾಯೇ ತುಂಗೆಯೆ, ಸಿರಿ ಮಲೆನಾಡಿನ
ಪಚ್ಚೆಯ ಪಸುರಿನ ನೋಟಗಳೆ;
ಬನಗಳ ಹೂಗಳ ಸೊಬಗನು ಮೀರುವ
ಚೆಲುವಿನ ಹೊಲಬಿಗ ಬಾಲೆಯರೆ;
ಬನದಲಿ ಬಯಲಲಿ ಹೊಳೆಯಲಿ ಮಳೆಯಲಿ
ನನ್ನೊಡನಾಡಿದ ಬಾಲಕರೆ;
ನಡೆಯಲಿ ಮೆಲ್ಲದೆ, ನುಡಿಯಲಿ ಮೆಲುದನಿ,
ನಿಮ್ಮದು ಮಲೆಗಳ ಸೋದರರೆ;
ರಂಗು, ತಿಮ್ಮು, ಗೌರಿ, ಗಿರಿಜೆ,
ಚಂದದ ಹೆಸರಿನ ಸೋದರರೆ;
ನಿಮ್ಮೊಡನಾಡಿದ ಗುಟ್ಟಿನ ನುಡಿಗಳ
ಬಯಲಿಗೆ ಬೀರುವೆ, ಮನ್ನಿಸಿರಿ!
ನಿಮ್ಮಂತೆಯೆ ನಾ ಹಾಡಲು ಬರದಿರೆ
ಪಾಮರ ಗೋಪನ ಮನ್ನಿಸಿರಿ!
ನಿಮ್ಮೆಲ್ಲರ ಶಿಷ್ಯನು ನಾ, ನಮಿಸುವೆ;
ಆಶೀರ್ವಾದವ ಬೇಡುವೆನು.
ನಿಮ್ಮಗಳೆಲ್ಲರ ಹರಕೆಯ ಬಲವಿರೆ
ಚೆನ್ನಾಗಿಯೆ ನಾ ಹಾಡುವೆನು!
ದನ, ಬನ, ಕಲ್ಗಳು ಮೆಚ್ಚಿದ ಕೊಳಲನು
ರಸಿಕರು ಮೆಚ್ಚದೆ ಮಾಣುವರೆ?

ಕಲ್ಗಳ ಕರಗಿಸಿದಿಂಚರವೆನ್ನದು
ಎದೆಗಳನೊಲಿಸದೆ ಮಾಣುವುದೆ?

೫

ಬನದೊಳು ಮೊದಲೀ ವೇಣುವನಕಟಾ
ಕೇಳಿದ ಕಿವಿಗಳನೊಡೆದೆಯ, ದೇವ?
ಗೊಲ್ಲನ ಕೊಳಲಿಗೆ ಉಸಿರನು ಕೊಟ್ಟಾ
ಎದೆಯಲರೊಂದನು ಕೊಯ್ದೆಯ, ಶಿವನೆ!
ಗೊಲ್ಲನ ಹಾಡನು ಹುರಿದುಂಬಿಸಿದಾ
ತಮ್ಮನ ತಿಮ್ಮುವನೊಯ್ದೆಯ, ಹರಿಯೆ!
ಕೊಳಲನು ಮೆಳೆಯಿಂ ಕೊಯ್ದವ ನೀನೆ,
ಕೊಳಲಿಗೆ ಕಣ್ಗಳ ಸಮೆದನ ನೀನೆ,
ನಚ್ಚಿನ ಮೆಚ್ಚಿನ ಸೋದರನೆ!
ಗೊಲ್ಲನ, ಅಣ್ಣನ ಗಾನವ ಕೇಳಿ
ಹೆಮ್ಮೆಯೊಳುಬ್ಬುತ ಮುದವನು ತಾಳಿ
ನಲಿದೈ ಮುದ್ದಿನ ಸೋದರನೆ!
ಆ ಕಣ್ಣಿನ ಬೆಳಕಳಿದುದೆ ಅಕಟಾ!
ಆ ಬಾಯ್ಬೆಂದುದೆ ಅಕಟಕಟಾ!
ಆ ಎದೆಯೊರತೆಯು ಬತ್ತಿತೆ ಹಾ! ಹಾ!
ಬಾಳಿನ ಜಾತ್ರೆಯು ಮುಗಿದುದೆ ಹಾ!
ಗೊಲ್ಲನು ಕೊಳಲನು ಕೇಳುತ ನಲಿವರು
ಏನನು ಬಲ್ಲರು ಸೋದರನೆ?
ಗೊಲ್ಲನ ಜಸದಲಿ ಅರೆಪಾಲೆಲ್ಲಾ
ನಿನ್ನದೆ, ನಿನ್ನದೆ, ಸೋದರನೆ!

೬

ಕಾಡಿನೊಳಿಬ್ಬರೆ ತಿರುಗಿದೆವಂದು,
ಹೂಗಳ ಕೊಯ್ದೆವು ಹಣ್ಗಳ ತಿಂದು.
ಬಣ್ಣದ ಚಿಟ್ಟೆಗಳನು ಹಿಡಿವಾಗ
ಮುದ್ದಿನ ತಿಮ್ಮುವೆ ಮುಂದಾಳು;
ಕೋಗಿಲೆಗಳ ನಾವಣಕಿಸುವಾಗ
ಅಲ್ಲಿಯು ನಾನೇ ಹಿಂದಾಳು;
ಕಡಿದಾದರೆಗಳನೇರುವ ಸಮಯದಿ,
ಹುತ್ತದ ಜೇನನು ಕೀಳುವ ಸಮಯದಿ,

ಬಿರುಸಿನ ಬೇಟೆಯನಾಡುವ ಸಮಯದಿ,
ಎಲ್ಲಿಯು ತಿಮ್ಮುವೆ ಕೆಚ್ಚಾಳು!
ನನಗಾತನೆ ನಮ್ಮೂರಿನ ಕಣ್ಣು;
ಈಗವನಾದನೆ ಬೇಳಿದ ಮಣ್ಣು!
ನನ್ನೆದೆಗಾತನೆ ಕನ್ನಡಿಯಂತೆ.
ಸೋದರನೆನ್ನಯ ಪಡಿನೆಳಲಂತೆ.
ಕನ್ನಡಿಯೊಡೆದುದು ಬರುಗನಸಂತೆ.
ಮೂಡಿತು ಮನದಲಿ ಮುರಿಯದ ಚಿಂತೆ.
ಒಂದೇ ವೀಣೆಯ ತಂತಿಗಳಂತೆ,
ಕಾಮನಬಿಲ್ಲಿನ ಬಣ್ಣಗಳಂತೆ,
ಹಾಡುವ ಕೊಳಲಿನ ಕಣ್ಣುಗಳಂತೆ
ಕೂಡಿದೆವಾಡಿದೆವೆಲೆ ತಮ್ಮಾ!
ಪರುಷವು ಹರಿದೀ ವೀಣೆಯ ವಾಣಿ.
ಬಡ ಮಳೆಬಿಲ್ಲಗೆಗೊಳಿಸದು ಇಂದು!
ಕಣ್ಣೊಂದಿಲ್ಲದ ಕೊಳಲಿದು ಇಂದು
ಕೊಡದಂದಿನ ಗಾನವ ತಮ್ಮಾ!

೭

ಹೋದವರೆಲ್ಲರ ಊರನು ಸೇರಿದೆ,
ತಮ್ಮಾ, ಗೊಲ್ಲನ ದುಃಖಕೆ ಮಾರಿದೆ!
ನಾ ಸಾವಿಗೆ ಅಂಜುವೆನೆಂದಲ್ಲ,
ಅದರರ್ಥವ ತಿಳಿಯದನೆಂದಲ್ಲ;
ನಿನ್ನಾ ಸಂಗಕೆ ಕೊರಗುವೆನು;
ನಿನ್ನಾ ಪ್ರೇಮಕೆ ಮರುಗುವೆನು!
ಶ್ರೀಗುರುದೇವನ ಪಾದವ ಸೇರಿದೆ;
ಬಲ್ಲೆನು ನಾನೂ ಸೇರುವೆನು.
ಮಾಡುವ ಕೆಲಸವ ಮುಗಿಯಿಸಿ ಬೇಗನೆ
ಬಲ್ಲೆನು ನಾನೂ ಸೇರುವೆನು.
ನಿನ್ನಯ ನೆನಪಿಗೆ ಗೊಲ್ಲನು ನೀಡುವ
ಪ್ರೇಮದ ಗಾನದ ಕಾಣ್ಕೆಯಿದು!
ಶ್ರೀಗುರುದೇವಗೆ ನೀನೆ ನಿವೇದಿಸು
ಕಬ್ಬಿಗನಿಂಚರಗಾಣ್ಕೆಯಿದು!

೨೫-೩-೧೯೨೯

## ಗುರಿ

ಗುರಿಯಾವುದೆಂದೆಲ್ಲ ಕೇಳುವರು ಎನ್ನ!
ಅರಿಯರೇ ಗುರಿಯು ಸರ್ವಕೆ ನೀನೆ ಎಂದು?

ಗುರಿಯು ನೀನೆಂದೆನಲು ನಾಚುವೆನು ಜನನಿ:
ಗುರಿಯು ನೀನೆನಲೆನ್ನ ಮರುಳನೆಂಬುವರು!
ತಿರೆಯ ಸಿರಿಸುತರೆದುರು ತಲೆವಾಗಿ ನಿಂತು
ಮನದಿ ನಿನ್ನನು ನೆನೆವೆ ನಮ್ರಭಾವದೊಳು!

ವಾದಿಸುವರೆನ್ನೊಡನೆ ಜೀವನವ ನಡಸೆ
ಮೇದಿನಿಯ ಸಿರಿಯೊಲ್ಮೆಯಿರಲೆ ಬೇಕೆಂದು;
ವಾದಗಳನಾಲಿಸುವೆ ನಸುನಗೆಯ ತಡೆದು,
ಹೇ ದೇವಿ, ನಿನ್ನ ಕೃಪೆಯಿಹುದೆಂದು ತಿಳಿದು!

ಬಲ್ಲರೇ ಅವರೆನ್ನ ಹೃದಯದೊಳಗಿಹುದು
ಸಲ್ಲಲಿತದಾನಂದ ಸಾಗರವು ಎಂದು!
ಜಗದ ಸಿರಿಸುತರೆನ್ನ ಜಡನೆಂದರೇನು?
ಅಗಲದಿರು ಎಲೆ ತಾಯೆ ಮನದಿಂದ ನೀನು!

-೧೯೨೭

## ಅಡವಿಯಲ್ಲಿ

ಅಂದು ನೀ ವನಗಳಲಿ ನುಡಿದ ಪಿಸುಮಾತು
ಇಂದಿಗೂ ಮೊರೆಯುತಿದೆ ಕರ್ಣಗಳಲಿ.
ಅಂದು ನೀನಡವಿಗಳಲಿತ್ತ ದರ್ಶನವೆ
ಇಂದಿಗೂ ತುಂಬಿಹುದು ನಯನಗಳನು.

ಬಿರುಸಾದ ನುಡಿಗಳನು ಕೇಳಿದೆನು ನಾನು,
ಆದರವು ಪಿಸುಮಾತ ಮೀರಲಿಲ್ಲ;
ವೈಭವದ ವೇಷಗಳ ನೋಡಿದೆನು ನಾನು,
ಆದರವು ದರ್ಶನವ ಜಯಿಸಲಿಲ್ಲ!

ಜಗದಿ ಕೇಳಿದುದೊಂದೆ - ನಿನ್ನ ಪಿಸುಮಾತು!
ಜಗದಿ ನೋಡಿದುದೊಂದೆ - ನಿನ್ನ ದರ್ಶನವು!
ಉಳಿದವರ ಮಾತು: ಬಾಯಿಲ್ಲದರ ಮಾತು!
ಉಳಿದಿತರ ನೋಟ: ಕಣ್ಣಿಲ್ಲದರ ನೋಟ!

೨೧-೭-೧೯೨೬